ಹೇಳಿದ ಪ್ರಕಾರ, ಕೆಲವು ಸಲ ಅಧೀನ ಅಧಿಕಾರಿಗಳು ಏನೇನು ಮಾಡಬೇಕೊ ಅದನ್ನು ಕಳುಹಿಸುತ್ತಾರೆ. ಆದರೆ ಒಂದೊಂದು ಸಲ ವಿಧಾನಸೌಧದಲ್ಲಿ ಕೂಡ ವಿಳಂಬವಾಗುತ್ತದೆ. ಮುಖ್ಯಮಂತ್ರಿಗಳು ಯಾವ ಕಡತಗಳನ್ನೂ ಹೆಚ್ಚು ದಿನಗಳು ಇಟ್ಟುಕೊಳ್ಳಬಾರದೆಂದು ಆದೇಶ ಹೊರಡಿಸಿರುವುದರಿಂದ ನನ್ನ ಇಲಾಖೆಯಲ್ಲಿರುವಂತಹ ಪೆಂಡಿಂಗ್ ಕಡತಗಳನ್ನು ಆಡಳಿತಾತ್ಮಕವಾಗಿ ಮಂಜೂರಾತಿಗೆ ಜರೂರಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾರ್ಚ್ 31ರೊಳಗೆ ಭಟ್ಕಳದ ಕ್ರೀಡಾಂಗಣದ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಂಡು ಇರತಕ್ಕ ಹಣ ಪೋಲಾಗದ ರೀತಿಯಲ್ಲಿ ನೋಡಿಕೊಂಡು ಫೌಂಡೇಶನ್ ಹಾಕುವುದಕ್ಕೆ ಒಪ್ಪಿ ವಿಧಾನಸಭೆಯ ಅಧಿವೇಶನ ಮಾರ್ಚಿ ಕೊನೆಯವರೆಗೆ ನಡೆಯುತ್ತಿರುವುದರಿಂದ ಅಧಿವೇಶನ ಮುಗಿದಮೇಲೆ ಮಾಡಲಾಗುವುದು.

ಶ್ರೀ ಆರ್.ಎನ್.ನಾಯಕ್ :- ಮಾರ್ಚಿ 30ನೇ ತಾರೀಖು ಬರಲಿ. ಇಲ್ಲದಿದ್ದರೆ ಕೆಲಸ ಆಗುವುದಿಲ್ಲ ನನಗೆ ಗೊತ್ತಿದೆ. ಮಾರ್ಚಿ 26 ನೇ ತಾರೀಖು ಅಧಿವೇಶನ ಮುಗಿಯುತ್ತದೆ. 30 ನೇ ತಾರೀಖು ಬರುತ್ತೇನೆಂದು ನನಗೆ ಮಾತು ಕೊಡಿ.

ಶ್ರೀ ಹೆಚ್. ವಿಶ್ವನಾಥ್ :- ಮಾನ್ಯಸದಸ್ಯರಾದ ನಾಯಕರವರಿಗೆ ಕ್ರೀಡಾಂಗಣದ ಬಗ್ಗೆ ಇರತಕ್ಕ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಸಮಜಾಯಿನ್ನು ತೆಗೆದುಕೊಂಡು ನಾನು ಕೆಲಸ ಮಾಡುತ್ತೇನೆ.

ಅಧ್ಯಕ್ಷರು :-ಶ್ರೀಮತಿ ಮೋಟಮ್ಮನವರೇ ತಾವು ಎದ್ದು ನಿಂತಿರಿ. ಇದು ಬಟ್ಕಳಕ್ಕೆ ಸಂಬಂಧಪಟ್ಟ ಪ್ರಶ್ನೆಯಿದೆ ತಮಗೆ ಸಂಬಂಧವಿಲ್ಲ.

ಶ್ರೀಮತಿ ಮೋಟಮ್ಮ :- ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು 12ಸ್ಪೇಡಿಯಂಗಳ ಕೆಲಸ ಪೆಂಡಿಂಗ್‌ನಲ್ಲಿದೆ. ಅವಕ್ಕೆ ಆಡಳಿತಾತ್ಮಕ ಮಂಜುರಾತಿ ದೊರತಿಲ್ಲವೆಂದು ಹೇಳಿದ್ದಾರೆ. ಅವು ಯಾವ್ಯಾವ ಸ್ಪೇಡಿಯಂಗಳು ಯಾವ್ಯಾವ ಕಾರಣಗಳಿಂದ ಅವುಗಳಿಗೆ ಆಡಳಿತಾತ್ಮಕ ಮಂಜುರಾತಿ ದೊರೆತಿಲ್ಲವೆನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಹೆಚ್. ವಿಶ್ವನಾಥ್ :- ಕೆಲವು ಕ್ರೀಡಾಂಗಣಗಳ ನಿವೇಶನ ನಮ್ಮ ಕೈಗೆ ದೊರತಿಲ್ಲ ಮತ್ತು ನಕ್ಷೆಗಳು ಬಂದಿಲ್ಲದೆ ಇರುವುದರಿಂದ ಅದರ ವಿವರಗಳನ್ನು ಕುರಿತು ನಾನು ಮತ್ತು ಮೋಟಮ್ಮನವರು ಪ್ರತ್ಯೇಕವಾಗಿ ಮಾತನಾಡುತ್ತೇವೆ.

9ನೇ ವಿಧಾನ ಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಮತ್ತು ಸಚಿವರ ಮೇಲೆ ದಾಖಲಾಗಿರುವ ಮೊಕದ್ದಮೆಗಳು.

12(615) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) 9ನೇ ವಿಧಾನ ಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಮತ್ತು ಸಚಿವರ ಮೇಲೆ ಈವರೆಗೆ ದಾಖಲಾಗಿರುವ ಮೊಕದ್ದಮೆಗಳು ಎಷ್ಟು,

ಆ) ಮೊಕದ್ದಮೆಗಳು. ಯಾವ ಯಾವ ದಂಡ ಸಂಹಿತೆಯ ಸೆಕ್ಷನ್ನಿನ ಪ್ರಕಾರ ದಾಖಲಾಗಿವೆ.

ಇ) ಹಾಲಿ ಸಚಿವರಾಗಿರುವವರ ಮೇಲೆ ಅಂತಹ ಮೊಕದ್ದಮೆಗಳು ದಾಖಲಾಗಿದ್ದಲ್ಲಿ ಅಂತಹವರನ್ನು ಮಂತ್ರಿಮಂಡಲದಿಂದ ಕೈಬಿಡಲಾಗುವುದೇ?

ಈ) 1989ರಿಂದ ಯಾವುದಾದರೂ ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಸಚಿವರ ಮೇಲಿರುವ ಮೊಕದ್ದಮೆಗಳನ್ನು ಸರ್ಕಾರ ಹಿಂದಕ್ಕೆ ಪಡೆದಿದೆಯೇ?

ಉ) ಹಾಗೆ ಪಡೆದಿದ್ದಲ್ಲಿ ಯಾವ ಯಾವ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 97 (ತೊಂಬತ್ತೇಳು) ಅನುಬಂಧ-ಎ

ಆ) ಅನುಬಂಧ-ಬಿ ನಲ್ಲಿ ನೀಡಲಾಗಿದೆ

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಉ) ಅನುಬಂಧ-ಸಿ ನಲ್ಲಿ ನೀಡಲಾಗಿದೆ.

ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರುಗಳ ಮೇಲಿರುವ ಮೊಕದ್ದಮೆಗಳು

ಅನುಬಂಧ-ಎ

ಕ್ರ.ಸಂ.	ಸದಸ್ಯರ ಹೆಸರು	ಅಪರಾಧ ಸಂಖ್ಯೆ ಕಲಂ	ಷರಾ
1	2	3	4
1.	ಶ್ರೀ ಎಂ. ಭಕ್ತವತ್ಸಲಂ, ವಿಧಾನಸಭಾ ಸದಸ್ಯರು	(1) ಅಂಡರ್‌ಸನ್ ಪೇಟೆ, ಪೋ.ಠಾ. ಅಪರಾದ ಸಂ. 58:82 ಕಲ್ರ 143-144-147-148-149-327 ಐಪಿಸಿ.	ದಿ: 30-6-1983 ರಂದು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಲಾಗಿದೆ.
		(2) ಮಾರಿಕುಪ್ಪಂ ಪೋ.ಠಾ. ಅಪರಾಧ ಸಂ. 68:82 ಕಲಂ 143-147-148-149-06-448-427 ರೆಡ್‌ವಿತ್ 34 ಐಪಿಸಿ.	-"-
		(3) ಮಾರಿಕುಪ್ಪಂ ಪೋ.ಠಾ. ಅಪರಾಧ ಸಂ. 64:82 ಕಲಂ 143-147-148-149-3411-427-436 ರೆಡ್‌ವಿತ್ 34 ಐಪಿಸಿ.	-"-
		(4) ಮಾರಿಕುಪ್ಪಂ ಪೋ.ಠಾ. ಅಪರಾಧ ಸಂ. 91:83 ಕಲಂ 143-144-147-149-427-448-379-183 ಐಪಿಸಿ.	ದಿ: 17-5-1991 ರಂದು ಖುಲಾಸೆಯಾಗಿದೆ.
		(5) ಮಾರಿಕುಪ್ಪಂ ಪೋ.ಠಾ ಅಪರಾಧ ಸಂ. 92:83 ಕಲಂ 143-147-149-427-188-	ದಿ: 26-11-1992 ರಂದು ಖುಲಾಸೆಯಾಗಿದೆ.

	ಐ.ಪಿ.ಸಿ.	
(6)	ಮಾರಿಕುಪ್ಪಂ ಪೋ.ಠಾ. ಅಪರಾಧ ಸಂ. 93:83 ಕಲಂ 143--147-149-427-188-ಐ.ಪಿ.ಸಿ.	-"-
(7)	ಅಂಡರ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 55:83 ಕಲಂ 143-147-148-149-427 353-188 ಐಪಿಸಿ.	ದಿ: 22-4-1989ರಂದು ಖುಲಾಸೆಯಾಗಿದೆ.
(8)	ಚಾಂಪಿಯನ್ ರೀಪ್ಸ್ ಪೋ.ಠಾ ಅಪರಾಧ ಸಂ. 111:83 ಕಲಂ 143-144-147-149-341-307-337-188. ಐಪಿಸಿ.	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.
(9)	ಉರಗಾಂ ಪೋ.ಠಾ. ಅಪರಾಧ ಸಂ. 71:83 ಕಲಂ 143-144-147-149-427-188 ಐಪಿಸಿ.	ದಿ: 22-4-1989 ರಂದು ಖುಲಾಸೆಯಾಗಿದೆ.
(10)	ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 51:84 ಕಲಂ 353-189-506 ಐಪಿಸಿ.	ದಿ: 15--5-1988ರಂದು ಖುಲಾಸೆಯಾಗಿದೆ.
(11)	ಅಂಡರ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 29:84 ಕಲಂ 143-144-147-148-149-	ದಿ: 4-8-1987 ರಂದು ಉಭಯಸ್ಥರಲ್ಲಿ ರಾಜಿಯಾಗಿದ್ದು

ಮೊಕದ್ದಮೆಯನ್ನು

	~~-447-344-427-~~1909 ಐಪಿಸಿ.	ಮುಕ್ತಾಯಗೊಳಿಸಲಾಗಿದೆ.
(12)	ಬಿಇಎಂಎಲ್ ನಗರ ಪೋ.ಠಾ ಅಪರಾಧ ಸಂ. 50:84 ಕಲಂ 353-506-109 ಐಪಿಸಿ	ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ವಿಚಾರಣಾ ಹಂತದಲ್ಲಿದೆ.
(13)	ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 204:84 ಕಲಂ 448-506-353-427 ಐಪಿಸಿ.	ದಿ: 25-5-1988ರಲ್ಲಿ ಉಭಯಸ್ಥರಲ್ಲಿ ರಾಜಿಯಾಗಿರುತ್ತದೆ.
(14)	ಉರಗಾಂ ಪೋ.ಠಾ ಅಪರಾಧ ಸಂ. 119:84 ಕಲಂ 419-420-465 ಐಪಿಸಿ	ದಿ: 6-12-1990 ರಂದು ಅಪಾದಿತರಿಗೆ ರೂ. 250: ಗಳನ್ನು ಜುಲ್ಮಾನೆ ಹಾಕಿ ವಿಡುಗಡೆ ಮಾಡಲಾಗಿದೆ.
(15)	ಉರಗಾಂ ಪೋ.ಠಾ. ಅಪರಾಧ ಸಂ. 121:84 ಕಲಂ 143-144-147-148-446-506 ಐಪಿಸಿ.	ದಿ: 8-10-1990 ರಂದು ಖುಲಾಸೆಯಾಗಿದೆ.

1	2	3	4
		454-380 ಐಪಿಸಿ.	
		(17) ಚಾಂಪಿಯನ್ ರೀಫ್ಸ್ ಪೋ.ಠಾ ಅಪರಾಧ ಸಂ. 131:84 ಕಲಂ 142-144-147-427-323 ಐಪಿಸಿ	ದಿ: 15-7-1987 ರಂದು ಉಭಯಸ್ಥರು ರಾಜಿಯಾಗಿರುತ್ತಾರೆ. ಮೊಕದ್ದಮೆ ಮುಕ್ತಾಯವಾಗಿದೆ.
		(18) ಚಾಂಪಿಯನ್ ರೀಫ್ಸ ಪೋ.ಠಾ. ಅಪರಾಧ ಸಂ. 132:84 ಕಲಂ 143-144-427-323 ಐಪಿಸಿ	ದಿ: 2-4-1983 ರಲ್ಲಿ ಉಭಯಸ್ಥರು ರಾಜಿಯಾಗಿದ್ದು ಮೊಕದ್ದಮೆಯನ್ನು ಮುಕ್ತಾಯಗೊಳಿಸಲಾಗಿದೆ.
		(19) ಚಾಂಪಿಯನ್ ರೀಫ್ಸ ಪೋ.ಠಾ. ಅಪರಾಧ ಸಂ. 133:84 ಕಲಂ 143-448-427 ಐಪಿಸಿ	ದಿ: 29-7-1987 ರಂದು ಉಭಯಸ್ಥರಲ್ಲಿ ರಾಜಿಯಾಗಿದ್ದು ಮೊಕ್ಕದ್ದಮೆಯನ್ನು ಮುಕ್ತಾಯಗೊಳಿಸಲಾಗಿದೆ.
		(20) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 248:84 ಕಲಂ 143-144-147-149-341-186 ರೆಡ್‌ವಿತ್ 94 ಕೆ.ಪಿ.ಆಕ್ಟ್	ದಿ: 10-2-1989 ರಂದು ಖಾಲಾಸೆಯಾಗಿದೆ.
		(21) ಚಾಂಪಿಯನ್ ರೀಫ್ಸ್ ಪೋ.ಠಾ. ಅಪರಾಧ ಸಂ. 148:84 ಕಲಂ 143-144-147-148-149-427 ಐಪಿಸಿ.	ದಿ: 8-9-1983 ರಂದು ಖುಲಾಸೆಯಾಗಿರುತ್ತದೆ.
		(22) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 44:85 ಕಲಂ. 143-144-147-148-149-341-324-307-427 ಐಪಿಸಿ.	ದಿ: 2-4-1990 ರಲ್ಲಿ ಖುಲಾಸೆಯಾಗಿದೆ.
		(23) ಚಾಂಪಿಯನ್ ರೀಫ್ಸ್ ಪೋ.ಠಾ. ಅಪರಾಧ ಸಂ. 134:84 ಕಲಂ 143-144-147-148-427-324 ಐಪಿಸಿ.	ದಿ: 27-5-1988 ರಲ್ಲಿ ಖುಲಾಸೆಯಾಗಿದೆ.
		(24) ಚಾಂಪಿಯನ್ ರೀಫ್ಸ್ ಪೋ.ಠಾ. ಅಪರಾಧ ಸಂ. 151:84 ಕಲಂ 143-144-341-365-342-323-324 ಐಪಿಸಿ.	ದಿ: 28-9-1983 ರಂದು ಖುಲಾಸೆಯಾಗಿದೆ
		(25) ಅಂಡರ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 48:87 ಕಲಂ 143-504-506 ಐಪಿಸಿ.	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.
		(26) ಅಂಡರ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 83:89 ಕಲಂ 143-144-147-322-327-	ನ್ಯಾಯಾಲಯದಿಂದ ವಜಾ ಮಾಡಲಾಗಿದೆ.

1	2	3	4
		427-452-307-506-149 ಐಪಿಸಿ.	
		(27) ಅಂಡರ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 86:89 ಕಲಂ 142-342-506-382-365 ಐಪಿಸಿ.	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.
		(28) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 377:89 ಕಲಂ 143-147-148-149-307 ಐಪಿಸಿ.	-"-
		(29) ಅಂಡರ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ 4:91 ಕಲಂ 353-427-448 ಐಪಿಸಿ	-"-
		(30) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 86:91 ಕಲಂ 143-144-147-149-448-427-995 ಐಪಿಸಿ.	-"-
		(31) ಬೇತಮಂಗಲ ಪೋ.ಠಾ. ಅಪರಾಧ ಸಂ. 45:91 ಕಲಂ 143-353-506-307 ಐಪಿಸಿ.	-"-
		(32) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 90:92 ಕಲಂ 143-145-147-149-448-323-353 ರೆಡ್‌ವಿತ್ 506 ಐಪಿಸಿ	-"- -"-
		(33) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 274:84 ಕಲಂ 143-147-148-149-427 ಐಪಿಸಿ.	ದಿ: 27-2-1990 ರಂದು ಖುಲಾಸೆಯಾಗಿದೆ.
		(34) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 2548:84 ಕಲಂ 143-341-186-189 ಐಪಿಸಿ.	ದಿ: 16-11-1988 ರಲ್ಲಿ ಖುಲಾಸೆಯಾಗಿದೆ.
		(35) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂಖ್ಯೆ : 148:86 ಕಲಂ 143-341 ಐಪಿಸಿ	ದಿ: 29-3-1990 ರಂದು ಉಭಯಸ್ಥರು ರಾಜಿಯಾಗಿದ್ದು ಮೊಕದ್ದಮೆಯನ್ನು ಮುಕ್ತಾಯಗೊಳಿಸಲಾಗಿದೆ.
		(36) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 135:87 ಕಲಂ 327 ರೆಡ್‌ವಿತ್ 34 ಐಪಿಸಿ.	ದಿ: 30-8-1990 ರಲ್ಲಿ ಖುಲಾಸೆಯಾಗಿದೆ.
		(37) ರಾಬರ್ಟ್‌ಸನ್‌ಪೇಟೆ ಪೋ.ಠಾ. ಪರಾಧ ಸಂ 52:91 ಕಲಂ 153 (ಎ)-447-427 ಐಪಿಸಿ	ಮೊಕದ್ದಮೆಯು ತನಿಖೆಯಲ್ಲಿದೆ.
		(38) ರಾಬರ್ಟ್‌ಸನ್‌ಪೇಟೆ ಪೋ.ಠಾ.	ಮೊಕದ್ದಮೆಯು

1	2	3	4
		ಅಪರಾಧ ಸಂ. 16:92 ಕಲಂ 196-506 ಐಪಿಸಿ.	ತನಿಖೆಯಲ್ಲಿದೆ.
		(39) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂಖ್ಯೆ 17:92 ಕಲಂ 196-506 ಐಪಿಸಿ.	-"-
		(40) ರಾಬರ್ಟ್‌ಸನ್‌ಪೇಟೆ ಪೋ.ಠಾ. ಅಪರಾಧ ಸಂ. 18:92 ಕಲಂ 195-506 ಐಪಿಸಿ.	-"-
2.	ಶ್ರೀ ವೈ.ಕೆ. ರಾಮಯ್ಯ ವಿಧಾನಸಭಾ ಸದಸ್ಯರು	ಕುಣಿಗಲ್ ಪೋ.ಠಾ. ಅಪರಾಧ ಸಂ. 334:92 ಕಲಂ 353-506 ಐಪಿಸಿ.	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.
3.	ಶ್ರೀ ಎಸ್. ರಮೇಶ್ ವಿಧಾನಸಭಾ ಸದಸ್ಯರು	ಕುಣಿಗಲ್ ಪೋ.ಠಾ. ಅಪರಾಧ ಸಂ. 116:92 ಕಲಂ 302 ಐಪಿಸಿ	ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
4.	ಶ್ರೀ ಶಫಿ ಅಹಮದ್ ವಿಧಾನಸಭಾ ಸದಸ್ಯರು	(1) ತುಮಕೂರು ನಗರ ಪೋ.ಠಾ. ಅಪರಾಧ ಸಂ. 328:86 ಕಲಂ 143-147-148-427-323-332-435 ರೆಡ್‌ವಿತ್ 34 ಐಪಿಸಿ.	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.
		(2) ತುಮಕೂರು ನಗರ ಪೋ.ಠಾ. ಅಪರಾಧ ಸಂ. 329:86 ಕಲಂ 143-147-153-427-332 ಐಪಿಸಿ.	-"-
		(3) ತಿಲಕ್‌ಪಾರ್ಕ್ ಪೋ.ಠಾ. ಅಪರಾಧ ಸಂ. 250:86 ಕಲಂ 143-147-148-149-324 ಐಪಿಸಿ.	-"-
		(4) ತುಮಕೂರು ನಗರ ಪೋ.ಠಾ ಅಪರಾಧ ಸಂ. 327:86 ಕಲಂ 143-147-148-149-341-322- ರೆಡ್‌ವಿತ್ 34 ಐಪಿಸಿ.	-"-
5.	ಶ್ರೀ ಡಿ.ಆರ್. ಪಾಟೀಲ್ ವಿಧಾನಸಭಾ ಸದಸ್ಯರು	ಗದಗ್ ಪೋ.ಠಾ. (ಗ್ರಾಮಾಣ) ಅಪರಾಧ ಸಂ. 64:92 ಕಲಂ 147-148-323-324-354-395-336-109 ರೆಡ್‌ವಿತ್ 149 ಐಪಿಸಿ	ಈ ಮೊಕದ್ದಮೆಯಲ್ಲಿ ಇವರು ಒಳಪಟ್ಟಿರುವುದು ಕಂಡುಬರುವುದಿಲ್ಲ.
6.	ಶ್ರೀ ಡಿ.ಕೆ. ಶಿವಕುಮಾರ್ ವಿಧಾನಸಭಾ ಸದಸ್ಯರು	ಕೋಡಿಹಳ್ಳಿ ಪೋ.ಠಾ. ಅಪರಾಧ ಸಂ. 128:86 ಕಲಂ	ಈ ಮೊಕದ್ದಮೆಯು ದಿ: 5-12-1992 ರಂದು

1	2	3	4
		136 (1) (ಎಫ್) ರೆಪ್ರಸಂಟೇಶನ್ ಸರ್ಕಾರ ಹಿಂತೆಗೆದುಕೊಂಡಿದೆ. ಆಫ್ ಪೀಪಲ್ಸ್ ಆಕ್ಟ್, 1951 ರೆಡ್‌ವಿತ್ 328 ಐಪಿಸಿ.	
7.	ಶ್ರೀ ಹೆಚ್.ಎಂ. ರೇವಣ್ಣ ವಿಧಾನಸಭಾ ಸದಸ್ಯರು	ಮಾಗಡಿ ಪೋ.ಠಾ. ಅಪರಾಧ ಸಂ. 159:84 ಕಲಂ 143-147-148-341-342-353-506-307-427 ಐಪಿಸಿ.	ಈ ಮೊಕದ್ದಮೆಯು ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.
8.	ಶ್ರೀ ಎ. ರುಕ್ಮಯ್ಯ ಪೂಜಾರಿ, ವಿಧಾನಸಭಾ ಸದಸ್ಯರು	ವಿಟ್ಲ ಪೋ.ಠಾ. ಅಪರಾಧ ಸಂ. 57:92, ಕಲಂ 143-147-148-447-506- ರೆಡ್‌ವಿತ್ 149 ಐಪಿಸಿ.	ಈ ಮೊಕದ್ದಮೆಯು ತನಿಖೆಯಲ್ಲಿದೆ.
9.	ಶ್ರೀ ವಿನಯಕುಮಾರ್ ಸೊರಕೆ, ವಿಧಾನಸಭಾ ಸದಸ್ಯರು	ಪುತ್ತೂರು ಪೋ.ಠಾ. ಅಪರಾಧ ಸಂ. 352:91 ಕಲಂ 420;405 ಐಪಿಸಿ.	ಈ ಮೊಕದ್ದಮೆಯು ತನಿಖೆಯಲ್ಲಿದೆ.
10.	ಶ್ರೀ ಕುಶಲ ವಿಧಾನಸಭಾ ಸದಸ್ಯರು	ಸುಳ್ಯ ಪೋ.ಠಾ. ಅಪರಾಧ ಸಂ. 142:85 ಕಲಂ 143-147-356-109-504-500-506 ರೆಡ್‌ವಿತ್ 149 ಐಪಿಸಿ.	ನ್ಯಾಯಾಲಯಕ್ಕೆ ಬಿ ವರದಿಯನ್ನು ಸಲ್ಲಿಸಲಾಗಿದೆ.
11.	ಶ್ರೀ ಜಿ.ಎಂ. ಕಾನಡೆ ವಿಧಾನಸಭಾ ಸದಸ್ಯರು	(1) ಸಿದ್ದಾಪುರ ಪೋ.ಠಾ. ಅಪರಾಧ ಸಂ. 61:91 ಕಲಂ 353-504-428 ಐಪಿಸಿ	ಈ ಮೊಕದ್ದಮೆಯು ದಿ: 3-8-1992 ರಂದು ನ್ಯಾಯಾಲಯದಲ್ಲಿ ಖಿಲಾಸೆಯಾಗಿದೆ.
		(2) ಸಿದ್ದಾಪುರ ಪೋ.ಠಾ. ಅಪರಾಧ ಸಂ. 61:91 ಕಲಂ 353-504-426 ರೆಡ್‌ವಿತ್ 34 ಐಪಿಸಿ.	ನ್ಯಾಯಾಲಯಕ್ಕೆ ಬಿ ಅಂತಿಮ ವರದಿ ಸಲ್ಲಿಸಲಾಗಿದೆ.
12.	ಶ್ರೀ ಕೆ.ಎಸ್. ಈಶ್ವರಪ್ಪ ವಿಧಾನಸಭಾ ಸದಸ್ಯರು	ಶಿವಮೊಗ್ಗ ಕೋಟೆ ಪೋ.ಠಾ. ಅಪರಾಧ ಸಂ. 197:89 ಕಲಂ 342-143 ರೆಡ್‌ವಿತ್ 149 ಐಪಿಸಿ.	ಈ ಮೊಕದ್ದಮೆಯು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.
13.	ಶ್ರೀ ಬಾಬುರಾವ್ ಚಿಂಚನ್ಸೂರ್, ವಿಧಾನಸಭಾ ಸದಸ್ಯರು	ಬಿಜಾಪುರ ನಗರ ಸ್ಟೇಷನ್ ಬಜಾರ್ ಪೋ.ಠಾ. ಅಪರಾಧ ಸಂ. 5:91 ಕಲಂ 147-504-506 ರೆಡ್‌ವಿತ್ 149 ಐಪಿಸಿ.	-"-
14.	ಶ್ರೀ ಮಾಲಿಕಯ್ಯ ಗುತ್ತೆದಾರ್ ವಿಧಾನಸಭಾ ಸದಸ್ಯರು	(1) ಅಫಜಲ್‌ಪುರ ಪೋ.ಠಾ. ಅಪರಾಧ ಸಂ. 85:89 ಕಲಂ 147-324-427 ರೆಡ್‌ವಿತ್ 149 ಐಪಿಸಿ.	ಬಿ ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸಿದೆ.
		(2) ದೇವಲಗಾಣಾಪುರ ಪೋ.ಠಾ. ಅಪರಾಧ ಸಂ. 32:87	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.

1	2	3	4
		ಕಲಂ 147-504-506-427-323-365-332-341 ರೆಡ್‌ವಿತ್ 149 ಐಪಿಸಿ.	
15.	ಶ್ರೀ ಎಲ್.ಆರ್. ಶಿವರಾಮೇಗೌಡ(1) ವಿಧಾನಸಭಾ ಸದಸ್ಯರು	ಬೆಂಡಿಗನವಿಲೆ ಪೋ.ಠಾ. ಅಪರಾಧ ಸಂ. 85:89 ಕಲಂ 143-145-147-149-307-448-323-324-395-437 ರೆಡ್‌ವಿತ್ 506 ಐಪಿಸಿ.	-"-
		(2) ಬೆಂಡಿಗನವಿಲೆ ಪೋ.ಠಾ. ಅಪರಾಧ ಸಂ. 20:90 ಕಲಂ 435 ಐಪಿಸಿ.	-"-
		(3) ಬೆಳ್ಳೂರು ಪೋ.ಠಾ. ಅಪರಾಧ ಸಂ. 94:92 ಕಲಂ 143-147-148-302-120(ಬಿ) ರೆಡ್‌ವಿತ್ 149 ಐಪಿಸಿ.	-"-
16.	ಶ್ರೀಮತಿ ಮಲ್ಲಾಜಮ್ಮ ವಿಧಾನಸಭಾ ಸದಸ್ಯರು	ಕೆ.ಎಂ. ದೊಡ್ಡಿ ಪೋ.ಠಾ. ಅಪರಾಧ ಸಂ. 174:92 ಕಲಂ 323-324-506-114 ರೆಡ್‌ವಿತ್ 34 ಐಪಿಸಿ.	ಪ್ರಕರಣವು ಇನ್ನು ಪೋಲೀಸ್ ತನಿಖಾ ಹಂತದಲ್ಲಿದೆ.
17.	ಶ್ರೀ ಚಿಕ್ಕಮಾದು ವಿಧಾನಸಭಾ ಸದಸ್ಯರು	ಹುಣಸೂರು ರೂರಲ್ ಪೋ.ಠಾ. ಅಪರಾಧ ಸಂ. 88:87 ಕಲಂ 148-147-148-323-353-324-427-ರೆಡ್‌ವಿತ್ 149 ಐಪಿಸಿ	ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.
18.	ಶ್ರೀ ಶಾಮರಾವ್ ಗಾಟ್ಗೆ ವಿಧಾನಸಭಾ ಸದಸ್ಯರು	ಕುಡಚಿ ಪೋ.ಠಾ. ಅಪರಾಧ ಸಂ. 106:91 ಕಲಂ 447-504-506 ರೆಡ್‌ವಿತ್ 34 ಐಪಿಸಿ	ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
19.	ಶ್ರೀ ವಿ.ವೈ. ಚವಾಣ್ ವಿಧಾನಸಭಾ ಸದಸ್ಯರು	ಖಾನಾಪುರ ಪೋ.ಠಾ. ಅಪರಾಧ ಸಂ. 8:93 ಕಲಂ 309 ಐಪಿಸಿ.	-"-
20.	ಶ್ರೀ ಪಾಟೀಲ್ ವೀರಕುಮಾರ್ ಅಪ್ಪಾ ಸಾಹೇಬ್, ವಿಧಾನಸಭಾ ಸದಸ್ಯರು	ನಿಪ್ಪಾಣಿ ಪೋ.ಠಾ. ಅಪರಾಧ ಸಂ. 76:86 ಕಲಂ 153 (ಎ) ಐಪಿಸಿ.	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.
21.	ಶ್ರೀ ಕೃಷ್ಣರಾವ್ ಚೂಡಾಮಣಿ ಮಾಡಗೆಕರ್ ವಿಧಾನಸಭಾ ಸದಸ್ಯರು	ಕಾಕತಿ ಪೋ.ಠಾ., ಅಪರಾಧ ಸಂ. 226:92 ಕಲಂ 447-427-506-504 ರೆಡ್‌ವಿತ್ 34 ಐಪಿಸಿ	ಪ್ರಕರಣವು ಇನ್ನು ಪೊಲೀಸ್ ತನಿಖಾ ಹಂತದಲ್ಲಿದೆ.
22.	ಶ್ರೀ ಸುಭಾಷ್ ಜೋಷಿ ವಿಧಾನಸಭಾ ಸದಸ್ಯರು	(1) ನಿಪ್ಪಾಣಿ ರೂರಲ್ ಪೋ.ಠಾ. ಅಪರಾಧ ಸಂ. 50:81 ಕಲಂ 143-147-148-504-323-325-336-353-332-307-395 ರೆಡ್‌ವಿತ್ 149 ಐಪಿಸಿ.	ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಲಾಗಿದೆ.

1	2	3	4
		(2) ನಿಪ್ಪಾಣಿ ರೂರಲ್ ಪೋ.ಠಾ. ಅಪರಾಧ ಸಂ. 44:81 ಕಲಂ 143-147-341-188 ರೆಡ್‌ವಿತ್ 149 ಐಪಿಸಿ.	-"-
23.	ಶ್ರೀ ಪಟೇಲ್ ಬಾಬುಗೌಡ ರುದ್ರೇಗೌಡ, ವಿಧಾನಸಭಾ ಸದಸ್ಯರು	(1) ಕಾಕತಿ ಪೋ.ಠಾ. ಅಪರಾಧ ಸಂ. 50:89 ಕಲಂ 143-147-148-353-341-352-307-427-324-323-338-404-506 ರೆಡ್‌ವಿತ್ 149 ಐಪಿಸಿ.	ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.
		(2) ಬೈಲಹೊಂಗಲ ಪೋ.ಠಾ. ಅಪರಾಧ ಸಂ. 258:87 ಕಲಂ 107 ಸಿಆರ್‌ಪಿಸಿ	ತಾಲ್ಲೂಕು ಮ್ಯಾಜಿಸ್ಟ್ರೇಟ್ ಅವರ ಹಂತದಲ್ಲಿ ಕೈಬಿಡಲಾಗಿದೆ.
		(3) ಕಿತ್ತೂರ್ ಪೋ.ಠಾ. ಅಪರಾಧ ಸಂ. 132:87 ಕಲಂ 143-147-341-504-436 ರೆಡ್‌ವಿತ್ 149 ಐಪಿಸಿ.	ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಲಾಗಿದೆ.
		(4) ಕಿತ್ತೂರು ಪೋ.ಠಾ. ಅಪರಾಧ ಸಂ. 133:87 ಕಲಂ 143-147-141-426-504-506 ರೆಡ್‌ವಿತ್ 149 ಐಪಿಸಿ.	-"-
24.	ಶ್ರೀ ಬಿ.ಎಸ್. ಯಡಿಯೂರಪ್ಪ ವಿಧಾನಸಭಾ ಸದಸ್ಯರು	ಧಾರವಾಡ ನಗರ ಪೋ.ಠಾ. ಅಪರಾಧ ಸಂ. 15:93 ಕಲಂ 151 ರೆಡ್‌ವಿತ್ 107 ಸಿಆರ್‌ಪಿಸಿ	ತಾಲ್ಲೂಕು ಮ್ಯಾಜಿಸ್ಟ್ರೇಟ್ ಅವರ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ.
(ಕಡತ ಸಂಖ್ಯೆ LAQ/615/93, ದಿನಾಂಕ 23-8-93ರಂದು ಅಧ್ಯಕ್ಷರು ಆದೇಶಿಸಿದಂತೆ ತೆಗೆದುಹಾಕಲಾಗಿದೆ.)			
25.	ಶ್ರೀ ಕೆ.ಎಂ. ಪುಟ್ಟು, ವಿಧಾನಸಭಾ ಸದಸ್ಯರು	ಮಳವಳ್ಳಿ ಪೋ.ಠಾ. ಅಪರಾಧ ಸಂ. 25:85 ಕಲಂ 147-148-325-114 ಮತ್ತು 449 ಐಪಿಸಿ.	ದಿ: 19-7-1989 ರಲ್ಲಿ ನ್ಯಾಯಾಲಯದಲ್ಲಿ ಖುಲಾಸೆಯಾಗಿದೆ.
26.	ಶ್ರೀ ಎಸ್.ಹೆಚ್. ಕರೆನಿಂಗ್ ವಿಧಾನಸಭಾ ಸದಸ್ಯರು	(1) ಗೋಕಾಕ್ ಪೋ.ಠಾ. ಅಪರಾಧ ಸಂ. 251:83 ಕಲಂ 147-506-109 ರೆಡ್‌ವಿತ್ 149 ಐಪಿಸಿ	ದಿ: 31-5-1985 ರಲ್ಲಿ ನ್ಯಾಯಾಲಯದಲ್ಲಿ ಖುಲಾಸೆಯಾಗಿದೆ.
		(2) ಗೋಕಾಕ್ ಪೋ.ಠಾ. ಅಪರಾಧ ಸಂ. 254:85 ಕಲಂ 107 ಸಿಆರ್‌ಪಿಸಿ	ದಿ: 8-9-1986 ರಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ರವರ ಹಂತದಲ್ಲಿ ಕೈಬಿಡಲಾಗಿದೆ.
		(3) ಗೋಕಾಕ್ ಪೋ.ಠಾ.	ದಿ: 2-12-1986ರಲ್ಲಿ

1	2	3	4
		ಸಂ. 37:86 ಕಲಂ 147-148-427-337 ರೆಡ್‌ವಿತ್ 149 ಸಿಆರ್‌ಪಿಸಿ	ತಾಲ್ಲೂಕು ಮ್ಯಾಜಿಸ್ಟ್ರೇಟ್ ರವರ ಹಂತದಲ್ಲಿ ಕೈಬಿಡಲಾಗಿದೆ.
		(4) ಗೋಕಾಕ್ ಪೋ.ಠಾ. ಸಂ. 336:86 ಕಲಂ 147-148-427-337 ರೆಡ್‌ವಿತ್ 149 ಐಪಿಸಿ.	ಉಭಯಸ್ಥರಲ್ಲಿ ರಾಜಿಯಾಗಿ ದಿ: 8-9-1987ರಲ್ಲಿ ಮುಕ್ತಾಯಗೊಳಿಸಲಾಗಿದೆ.
27.	ಶ್ರೀ ಆರ್.ಎಲ್. ಜಾಲಪ್ಪ ವಿಧಾನ ಸಭಾ ಸದಸ್ಯರು	ಬೆಂಗಳೂರು ನಗರ ಹೈಗ್ರೌಂಡ್ಸ್ ಪೋ.ಠಾ. ಅಪರಾಧ ಸಂ. 405:87 ಕಲಂ 203-301-121(ಬಿ) 364-342-218 ರೆಡ್‌ವಿತ್ 109 ಐಪಿಸಿ.	ನ್ಯಾಯಾಲಯದಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಮುಕ್ತರಾಗಿರುತ್ತಾರೆ.
28.	ಶ್ರೀಮತಿ ರೇಣುಕಾ ರಾಜೇಂದ್ರನ್ ವಿಧಾನಸಭಾ ಸದಸ್ಯರು	ಬೆಂಗಳೂರು ನಗರ ಹೈಗ್ರೌಂಡ್ಸ್ ಪೋ.ಠಾ. ಅಪರಾಧ ಸಂ. 525:79 ಕಲಂ 420-162-163 ಐಪಿಸಿ.	ಪ್ರಕರಣಕ್ಕೆ ಸಂಬಂಧಿಸಿದಂತೆ ದಿ: 9-12-1981 ರಂದು ನ್ಯಾಯಾಲಯದಿಂದ ವಿಮುಕ್ತರಾಗಿರುತ್ತಾರೆ.
	ವಿಧಾನ ಪರಿಷತ್ ಸದಸ್ಯರು		
29.	ಶ್ರೀ ಬಸವರಾಜ ಹೊರಟ್ಟಿ ವಿಧಾನ ಪರಿಷತ್ ಸದಸ್ಯರು	ಬ್ಯಾಡಗಿ ಪೋ.ಠಾ. ಅಪರಾಧ ಸಂ. 47:92 ಕಲಂ 506 ಐಪಿಸಿ	ಪೋಲೀಸ್ ತನಿಖೆಯ ನಂತರ ನ್ಯಾಯಾಲಯಕ್ಕೆ ಸಿ ಅಂತಿಮ ವರದಿಯನ್ನು ಸಲ್ಲಿಸಿದೆ.
30.	ಶ್ರೀ ಪ್ರೇಮಚಂದ್ರ ಸಾಗರ್ ವಿಧಾನಪರಿಷತ್ ಸದಸ್ಯರು	(1) ತಿಲಕ್‌ನಗರ ಪೋ.ಠಾ. ಅಪರಾಧ ಸಂ. 114:92 ಕಲಂ 447-427 ರೆಡ್‌ವಿತ್ 34 ಐಪಿಸಿ	ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
		(2) ತಿಲಕ್‌ನಗರ ಪೋ.ಠಾ. ಅಪರಾಧ ಸಂ. 137:91 ಕಲಂ 447-427 ರೆಡ್‌ವಿತ್ 34 ಐಪಿಸಿ.	-"-

ಅನುಬಂಧ-ಬಿ

ಸಚಿವರುಗಳ ಮೇಲಿರುವ ಮೊಕದ್ದಮೆಗಳು

ಅ) ಮೊಕದ್ದಮೆಗಳು ಯಾವ ಯಾವ ದಂಡ ಸಂಹಿತೆಯ ಸೆಕ್ಷನ್ನಿನ ಪ್ರಕಾರ ದಾಖಲಾಗಿವೆ.

ಶ್ರೀ ಟಿ.ಎಂ. ಮಂಜುನಾಥ ಮಾನ್ಯ ಮಂತ್ರಿಗಳು :

1) ತಿಪಟೂರು ಟೌನ್ ಪೋಲೀಸ್ ಸ್ಟೇಷನ್ ಅಪರಾಧ ಸಂಖ್ಯೆ : 132:90 ಕಲಂ 323-350-353-114-342 ಐಪಿಸಿ ನ್ಯಾಯಾಲಯಕ್ಕೆ ಬಿ ವರದಿಯನ್ನು ಸಲ್ಲಿಸಲಾಗಿದೆ.

2) ತಿಪಟೂರು ಪೋಲೀಸ್ ಸ್ಟೇಷನ್ ಅಪರಾಧ ಸಂಖ್ಯೆ : 30:91 ಕಲಂ 506 ಐಪಿಸಿ ಪ್ರಕರಣವನ್ನು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು ಖುಲಾಸೆಯಾಗಿದೆ.

3) ತಿಪಟೂರು ಪೋಲೀಸ್ ಠಾಣೆ ಅಪರಾಧ ಸಂಖ್ಯೆ : 28:78 ಕಲಂ 147, 143, 448, 354, 353 ಐ.ಪಿ.ಸಿ. ಖುಲಾಸೆ ಆಗಿದೆ.

4) ತಿಪಟೂರು ಪೋಲೀಸ್ ಠಾಣೆ ಅಪರಾಧ ಸಂಖ್ಯೆ 44:84 ಕಲಂ 506 ಐಪಿಸಿ ಪ್ರಕರಣದ ಬಗ್ಗೆ ಉಭಯಸ್ಥರಲ್ಲಿ ರಾಜಿಯಾಗಿ ಮುಕ್ತಾಯಗೊಳಿಸಲಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್, ಮಾನ್ಯ ಜವಳಿ ಮಂತ್ರಿಗಳು :

1) ಗದಗ ಗ್ರಾಮಾಣ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 64:92 ಕಲಂ 147-148-323-324-354-395-336-109-ರೆಡ್‌ವಿತ್ 149 ಐಪಿಸಿ.

ಈ ಪ್ರಕರಣದಲ್ಲಿ ತನಿಖೆ ಕೈಗೊಂಡ ನಂತರ ಶ್ರೀ ಹೆಚ್.ಕೆ. ಪಾಟೀಲ್, ಮಾನ್ಯ ಮಂತ್ರಿಗಳು ಈ ಪ್ರಕರಣದಲ್ಲಿ ಸಿಲುಕದೆ ಇರುವುದರಿಂದ ಇವರನ್ನು ಈ ಪ್ರಕರಣದಿಂದ ಹೊರತುಪಡಿಸಿದೆ.

ಶ್ರೀ ಎ. ಕೃಷ್ಣಪ್ಪ, ಮಾನ್ಯ ಮಂತ್ರಿಗಳು :

1) ಮಹದೇವಪುರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 107:89 ಕಲಂ 143-149-448-323- ಐಪಿಸಿ ತನಿಖೆ ಕೈಗೊಂಡ ನಂತರ ನ್ಯಾಯಾಲಯಕ್ಕೆ ದಿನಾಂಕ 16-10-89 ರಂದು ಸಿ ವರದಿಯನ್ನು ಸಲ್ಲಿಸಲಾಗಿದೆ.

ಶ್ರೀ ರಾಮಲಿಂಗರೆಡ್ಡಿ, ಮಾನ್ಯ ಮಂತ್ರಿಗಳು :

ಸಿದ್ದಾಪುರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 71:90 ಕಲಂ 143-144-147-323-427 ಐಪಿಸಿ ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ದಿನಾಂಕ 3-2-93 ರಂದು ಸಲ್ಲಿಸಲಾಗಿದೆ.

ಶ್ರೀ ಆರ್. ಗೋಪಿನಾಥ ಸಾಂಡ್ರ, ಮಾನ್ಯ ಮಂತ್ರಿಗಳು :

1) ಹುಬ್ಬಳ್ಳಿ ನಗರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 230:87 ಕಲಂ 147-148-427-506 ರೆಡ್‌ವಿತ್ 149. ಐಪಿಸಿ ಪ್ರಕರಣದ ಬಗ್ಗೆ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

2) ಹುಬ್ಬಳ್ಳಿ ನಗರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 232:87 ಕಲಂ 147-457-427-506 ರೆಡ್‌ವಿತ್ 149 ಐಪಿಸಿ, ಪ್ರಕರಣದ ಬಗ್ಗೆ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಿದ್ದು, ಇದನ್ನು ನ್ಯಾಯಾಲಯ ಅಂಗೀಕರಿಸಿದೆ. ದೂರುದಾರರು ಈ ಪ್ರಕರಣದ ಬಗ್ಗೆ ಮರುಪರಿಶೀಲಿಸುವಂತೆ ಅರ್ಜಿಯನ್ನು ನ್ಯಾಯಾಲಯಕ್ಕೆ ನೀಡಲಾಗಿದ್ದು, ನ್ಯಾಯಾಲಯವು ಇದನ್ನು ಪುನಃ ತೆರೆದು ಈ ಪ್ರಕರಣವನ್ನು ಸಿ.ಸಿ. ನಂ. 1178:88 ರಲ್ಲಿ ದಾಖಲಿಸಿ ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.

ಶ್ರೀ ರಮ್ಮಾನಾಥ ರೈ, ಮಾನ್ಯ ಮಂತ್ರಿಗಳು

ಬಂಟ್ವಾಳ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 177:91 ಕಲಂ 323-324-353-504 ರೆಡ್‌ವಿತ್ 34 ಐಪಿಸಿ ಪ್ರಕರಣದ ಬಗ್ಗೆ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

ಶ್ರೀ ಮದನ ಗೋಪಾಲ್‌ನಾಯಕ್, ಮಾನ್ಯ ಮಂತ್ರಿಗಳು :

ಶೋರಾಪುರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 140:91 ಕಲಂ 147-148-329-427 ಐಪಿಸಿ ಮತ್ತು 129 ಆರ್.ಪಿ.ಆಕ್ಟ್, ಪ್ರಕರಣದ ಬಗ್ಗೆ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ಬಿ ವರದಿಯನ್ನು ಸಲ್ಲಿಸಲಾಗಿದೆ.

ಶ್ರೀ ಭೀಮಣ್ಣ ಖಂಡ್ರೆ, ಮಾನ್ಯ ಮಂತ್ರಿಗಳು

ಬಾಲ್ಕಿ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 104:90 ಕಲಂ 147-506 ರೆಡ್‌ವಿತ್ 149 ಐಪಿಸಿ ಪ್ರಕರಣದ ಬಗ್ಗೆ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ದಿನಾಂಕ 10-6-90ರಂದು ಬಿ ವರದಿಯನ್ನು ಸಲ್ಲಿಸಲಾಗಿದೆ.

ಅನುಬಂಧ - ಸಿ

ಸರ್ಕಾರದಿಂದ ಹಿಂತೆಗೆದುಕೊಂಡ ಮೊಕದ್ದಮೆಗಳು

ಉ) ಹಾಗೆ ಪಡೆದಿದ್ದಲ್ಲಿ ಯಾವ ಯಾವ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಲಾಗಿದೆ, ಹಾಗೂ ಅದಕ್ಕೆ ಕಾರಣಗಳನ್ನು ನೀಡುವುದು.

1) ಶ್ರೀ ಡಿ.ಕೆ. ಶಿವಕುಮಾರ್, ವಿಧಾನ ಸಭಾ ಸದಸ್ಯರು :

ಕೋಡಿಹಳ್ಳಿ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 128:86 ಕಲಂ 186(1) (ಎಫ್) ಕೆ.ಪಿ. ಆಕ್ಟ್ 145 ಇದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ದಿನಾಂಕ 18-11-92 ರಂದು ಹಿಂತೆಗೆದುಕೊಳ್ಳಲಾಗಿದೆ.

2) ಶ್ರೀ ಬಾಬುಗೌಡ ಪಾಟೀಲ್, ವಿಧಾನ ಸಭಾ ಸದಸ್ಯರು :

ಅ)

ಕಿತ್ತೂರು ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 132:87 ಕಲಂ 143-147-341-504-436 ರೆಡ್‌ವಿತ್ 149 ಐಪಿಸಿ ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಲಾಗಿದೆ. ದಿನಾಂಕ 5-9-91 ರಂದು

ಆ) ಕಿತ್ತೂರು ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 133:87 ಕಲಂ 143-147-141-426-504-506 ರೆಡ್‌ವಿತ್ 149 ಐಪಿಸಿ ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಲಾಗಿದೆ. ದಿನಾಂಕ 5-9-91 ರಂದು

3) ಶ್ರೀ ಸುಭಾಷ್ ಜೋಷಿ ಮತ್ತು ಶ್ರೀ ವೀರಕುಮಾರ್ ಎ. ಪಾಟೀಲ್, ವಿಧಾನಸಭಾ ಸದಸ್ಯರು :

ನಿಪ್ಪಾಣಿ ರೂರಲ್ ಪೋಲೀಸ್ ಸ್ಟೇಷನ್ ಅಪರಾಧ ಸಂಖ್ಯೆ 50:81 ಕಲಂ 143-147-

148-504-323-325-336-363-332-307-395 ರೆಡ್‌ವಿತ್ 149 ಐಪಿಸಿ ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಂತೆಗೆದುಕೊಳ್ಳಲಾಗಿದೆ. ದಿನಾಂಕ 1-3-83 ರಂದು.

4) ಶ್ರೀ ಸುಭಾಷ್ ಜೋಷಿ, ವಿಧಾನ ಸಭಾ ಸದಸ್ಯರು :

ನಿಪ್ಪಾಣಿ ರೂರಲ್ ಪೋಲೀಸ್ ಸ್ಟೇಷನ್ ಅಪರಾಧ ಸಂಖ್ಯೆ 44:81 ಕಲಂ 143-147-341-188 ರೆಡ್‌ವಿತ್ 149 ಐಪಿಸಿ ಹಾಗೂ 37(1) ರೆಡ್‌ವಿತ್ 109 ಕೆ.ಪಿ. ಆಕ್ಟ್ ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಲಾಗಿದೆ. ದಿನಾಂಕ 28-12-92 ರಂದು.

ಶ್ರೀ ಬಸವರಾಜ ರಾಯರೆಡ್ಡಿ :- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ ಎಷ್ಟು ಜನ ಹಾಲಿ ಸದಸ್ಯರ ಸಚಿವರ ಮೇಲೆ ಐಪಿಸಿ ಇನ್ನಿತರ ದಂಡ-ಸಂಹಿತೆಯ ಪ್ರಕಾರ ಅಪರಾಧ ಎಸಗಿದವರ ಮೇಲೆ ಮೊಕದ್ದಮೆಗಳನ್ನು ದಾಖಲೆ ಮಾಡಿಕೊಂಡಿದ್ದೀರಿ ? ದಾಖಲೆ ಮಾಡಿಕೊಂಡಿರುವದರಲ್ಲಿ ಸರ್ಕಾರ ಏನಾದರೂ ಬಿ ರಿಪೋರ್ಟ್ ಸಲ್ಲಿಸಿದೆಯೆ ಎಂದು ಕೇಳಿದ್ದೇನೆ? ಇದರಲ್ಲಿ ಈಗಿರುವಂತಹ ಹಾಲಿ ಮಂತ್ರಿಗಳಾದ ಶ್ರೀ ಟಿ.ಎಂ. ಮಂಜುನಾಥ್, ಹೆಚ್.ಕೆ. ಪಾಟೀಲ್, ಎ. ಕೃಷ್ಣಪ್ಪ, ರಾಮಲಿಂಗಾರೆಡ್ಡಿ, ಗೋಪಿನಾಥ ನಾಂಡ್ರ ,ರಮಾನಾಥರೈ, ಮಧನಗೊಪಾಲನಾಯಕ್ ಮತ್ತು ಭೀಮಣ್ಣಖಂಡ್ರೆ ಅವರ ಮೇಲೆ ಕೆಲವು ಮೊಕದ್ದಮೆಗಳನ್ನು ದಾಖಲೆ ಮಾಡಿಕೊಂಡು ಇವರೆಲ್ಲರ ಮೇಲೆ ಕೂಡ ಬಿ ರಿಪೋರ್ಟ್‌ನ್ನು ಸರ್ಕಾರ ಕೊಟ್ಟಿದೆ. ಯಾವ ಆಧಾರದ ಮೇಲೆ ಬಿ ರೀಪೋರ್ಟ್‌ನ್ನು ಪೋಲಿಸರು ಸಲ್ಲಿಸಿದ್ದಾರೆಂಬುದನ್ನು ತಿಳಿಸಬೇಕು. ಮತ್ತು ಗೋಪಿನಾಥ ಸಾಂಡ್ರರವರ ಕೇಸಿನಲ್ಲಿ ಏನು ಪೋಲಿಸರು ರಿಪೋರ್ಟ್ ಕೊಟ್ಟಿದ್ದರು ಬಿ ರಿಪೋರ್ಟ್ ಬಗ್ಗೆ ಪುನಃ ಅರ್ಜಿದಾರರು ದೂರು ಸಲ್ಲಿಸಿದ್ದಾರೆ. ಮತ್ತೆ ಕೋರ್ಟಿನಲ್ಲಿ ಬಿ ರೀಪೋರ್ಟ್‌ನ್ನು ವಿಚಾರಣೆಗೆ ತೆಗೆದುಕೊಂಡಿದ್ದಾರೆ, ಆದ್ದರಿಂದ ಇಂತಹವರನ್ನು ಸಂಪುಟದಿಂದ ಕೈಬಿಡುತ್ತೀರ? ಹೇಗೆ ಎಂಬುದನ್ನು ದಯವಿಟ್ಟು ತಿಳಿಸಬೇಕು.ಕೊನೆಯದಾಗಿ ಕ್ರಿಮಿನಲ್ ಕೇಸಿನಲ್ಲಿ ಇನ್‌ವಾಲ್ವ್ ಆಗಿರುವವರನ್ನು ಸಚಿವರನ್ನು ಸಂಪುಟದಿಂದ ಕೈಬಿಡುತ್ತೀರ? ಎಂದು ಕೇಳಿದ್ದರೆ ಕೈಬಿಡುವುದಿಲ್ಲವೆಂದು ಹೇಳಿದ್ದೀರಿ. ಎರಡು ನೀತಿಯನ್ನು ತಾವು ಇಲ್ಲಿ ಅನುಸರಿಸುತ್ತಿದ್ದೀರಿ ಎಂದು ನನಗನಿಸುತ್ತದೆ. ಏಕೆಂದರೆ ರೇವಣ್ಣನವರ ಮೇಲೆ ಕೇಸಿದೆ ಎಂದು ಹೇಳಿ ಅವರನ್ನು ಸಂಪುಟದಿಂದ ಕೈಬಿಟ್ಟಿದ್ದೀರಿ. ಇಲ್ಲ ಅದೇ ಸೇಮ್ ಐಪಿಸಿ ಸೆಕ್ಷನ್ 504,147,148 ಇವೆಲ್ಲಾ ಕ್ರಿಮಿನಲ್ ಕೇಸುಗಳೇ 504 is a cognisable offence. It is a non-compoundable case ಅದಕ್ಕೆ ನೀವು ರೇವಣ್ಣನವರನ್ನು ಹಿಂದುಳಿದ ಸಮಾಜಕ್ಕೆ ಸೇರಿದವರೆಂದು ಸಂಪುಟದಿಂದ ಕೈಬಿಡುತ್ತೀರಾ? ಹಾಗಾದರೆ ಬೇರೆಯವರನ್ನು ಏತಕ್ಕೆ ಸಂಪುಟದಿಂದ ಕೈಬಿಡುವುದಿಲ್ಲ. ತಾವು ಇದಕ್ಕೆ ದಯವಿಟ್ಟು ಸ್ಪಷ್ಟವಾದ ಉತ್ತರವನ್ನು ಹೇಳಬೇಕೆಂದು ಕೇಳುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಪ್ರಶ್ನೆ, ಸಭಾಧ್ಯಕ್ಷರೆ, ಇಲ್ಲಿ ಕೆಲವು ಸಚಿವರ ಮೇಲೆ ಮಾಡಿರುವ ಆಪಾದನೆಗಳ ಪಟ್ಟಿ ಮಾಡಿದ್ದಾರೆ. ಕೆಲವಕ್ಕೆ ಬಿ ರೀಪೋರ್ಟ್ ಸಲ್ಲಿಸಿಲಾಗಿದೆಯೆಂದು ಹಲವಾರು ಮೊಕದ್ದಮೆಗಳಲ್ಲಿ ಹೇಳಿದ್ದಾರೆ.ಕೆಲವಕ್ಕೆ ಯಾವತ್ತು ಬಿ ರೀಪೋರ್ಟ್ ಸಲ್ಲಿಸಲಾಗಿದೆಯೆಂದು ತಾರೀಖು ಕೊಟ್ಟಿದ್ದಾರೆ, ಕೆಲವಕ್ಕೆ ತಾರೀಖು ಕೊಟ್ಟಿಲ್ಲ. ಟಿ.ಎಂ ವಂಜುನಾಥರವರ ಮೊದಲನೇ ಮೊಕದ್ದಮೆಯಲ್ಲಿ ಬಿ ವರದಿಯನ್ನು ಸಲ್ಲಿಸಲಾಗಿದೆ ಎಂದು ಹೇಳಿದ್ದೀರಿ ಯಾವತ್ತು ಸಲ್ಲಿಸಲಾಗಿದೆ? ಆಮೇಲೆ ಗೋಪಿನಾಥ ಸಾಂಡ್ರ ಅವರ ಮೊದಲನೆ ಮೊಕದ್ದಮೆಯಲ್ಲಿ ಬಿ ವರದಿಯನ್ನು ಸಲ್ಲಿಸಲಾಗಿದೆ ಎಂದು ಹೇಳಿದ್ದೀರಿ ಯಾವತ್ತು ಸಲ್ಲಿಸಲಾಗಿದೆ?

ಅದೇರೀತಿ ರಮಾನಾಥರೈರವರ ಮೊಕದ್ದಮೆಯಲ್ಲಿ ಬಿ ವರದಿಯನ್ನು ಸಲ್ಲಿಸಲಾಗಿದೆ ಎಂದು ಹೇಳಿದ್ದೀರಿ ಯಾವತ್ತು ಸಲ್ಲಿಸಲಾಗಿದೆ? ಮಧನಗೊಪಾಲನಾಯಕ ಅವರ ಮೊಕದ್ದಮೆಯಲ್ಲಿ ಬಿ ವರದಿಯನ್ನು ಸಲ್ಲಿಸಲಾಗಿದೆ ಎಂದು ಹೇಳಿದ್ದೀರಿ ಯಾವತ್ತು ಸಲ್ಲಿಸಲಾಗಿದೆ? ಇದು ಬಹಳ ಮುಖ್ಯವಾಗಿರುತ್ತದೆ, ಇದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೇ, ಈಗ ಸನ್ಮಾನ್ಯ ಮಂತ್ರಿಗಳ ಮೇಲೆ ಇರುವ ಮೊಕದ್ದಮೆಗಳ ಬಗ್ಗೆ ಬಿ ರಿಪೋರ್ಟ್ ನಮ್ಮ ಸರ್ಕಾರ ಬಂದಮೇಲೆ ಸಲ್ಲಿಸಿದ್ದಲ್ಲ. ಇಗಕ್ಕಿಂತ ಮೊದಲೇ ಸಲ್ಲಿಸಲಾಗಿದೆ. ಈಗ ಕೆಲವು ವಿವರಗಳಿವೆ. ಎಂ. ಕೃಷ್ಣಪ್ಪ, ಅವರದ್ದು ಸಿ ವರದಿ ಕೂಡ ಕೊಟ್ಟಿದೆ. ಅದು 9-2-92 ಎಂದು ಏನೋ ಇದೆ,ವಿವರ ಇಲ್ಲ ಅದನ್ನು ನಾನು ಚೆಕಪ್ ಮಾಡುತ್ತೇನೆ. ಶ್ರೀ ರಮಾನಾಥರೈ ಅವರದ್ದು 2-11-92,ಮಧನಗೊಪಾಲನಾಯಕ್ ಅವರದ್ದು24-1-92 ಗೋಪಿನಾಥ ಸಾಂಡ್ರ ಅವರದ್ದು 17-10-88 ಮತ್ತು ಭೀಮಣ್ಣಖಂಡ್ರೆ ಅವರದ್ದು19-11-90 ರಾಮಲಿಂಗಾರೆಡ್ಡಿ ಅವರದ್ದು ಪೋಲಿಸಿನವರು ಮೊದಲು ಬಿ ರಿಪೋರ್ಟ್‌ನ್ನು ಸಲ್ಲಿಸಿದ್ದಾರೆ. I will check up that . There is some discrepancy.3-2-92 ರಂದು ಬಿ ವರದಿಯನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದು 3-2-93 ಇರಬೇಕು, ಅವರು ಮಂತ್ರಿಗಳಾದ ಮೇಲೆ ಇರಬೇಕು.

ಶ್ರೀ ಎಂ. ವೀರಪ್ಪಮೊಯಿಲಿ :- ಈಗ ಒಂದು ವಿಚಾರ ತಾವೇ ಹೇಳಿದ್ದೀರಿ ಅದು ರೇವಣ್ಣ ಅವರ ಬಗ್ಗೆ. ಇಲ್ಲಿ ದ್ವಂದ್ವ ನೀತಿ ಪ್ರಶ್ನೆ ಅಲ್ಲ. ಇಲ್ಲಿ ಪ್ರಶ್ನೆ ಏನೆಂದರೆ ಈಗ moral turpitude ವಿಚಾರ ಬರುತ್ತದೆ. Moral turpitude ಪ್ರಶ್ನೆಬಂದಾಗ ನಿಜ,ಇಲ್ಲದಿದ್ದರೆ ಬಹುಶಃ ಎಲ್ಲರ ಮೇಲೂ ಒಂದೊದು ಕೇಸ್ ಇದೆ ಏಕೆಂದರೆ ರಾಜಕೀಯ ಕಾರಣದಿಂದ ಕೇಸ್ ಹಾಕುತ್ತಾರೆ. ರಾಜಕೀಯ ಜೀವನದಲ್ಲಿ ಸಕ್ರೀಯವಾಗಿ ಕೆಲಸ ಮಾಡುತ್ತ ಇರತಕ್ಕಂತಹ ಜನರ ಮೇಲೆ ಇವತ್ತು ಎಂ.ಎಲ್.ಎ.ಗಳಾಗುವುದಕ್ಕೆ ಡಿಸ್ ಕ್ವಾಲಿಫೈ ಮಾಡುವುದಿದ್ದರೆ ಅಥವಾ ಅವರು ಮಂತ್ರಿಗಳು ಆಗಬಾರದೆಂದು ಹೊರಟುಬಿಟ್ಟರೆ ಬಹುಶಃ ಸಾರ್ವಜನಿಕ ಜೀವನದಲ್ಲಿ ಯಾರಿಗೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.ಬೇರೆ ಬೇರೆ ಕಾರಣಗಳಿಂದ ಎಲ್ಲರೂ ಡಿಸ್ ಕ್ವಾಲಿಫೈ ಆಗುವ ಪ್ರಶ್ನೆ ಬರುತ್ತದೆ. ಬಹುಶಃ ಸಾಕಷ್ಟು ಡಿಬೇಟ್‌ಗಳು , ಸಾರ್ವಜನಿಕ ಚರ್ಚೆಗಳು ಇವರಲ್ಲಿ ನಡೆಯಬೇಕಾಗುತ್ತದೆ. ನಾವು ಒಂದು ಕೇಸ್ ಇದೆ,ಮತ್ತೊಂದು ಕೇಸ್ ಇದೆಯೆಂದು subsist ಮಾಡು ಒಂದೇಕಾರಣದಿಂದಲೇ ನಾವು ವಾಡುವುದಿಲ್ಲ. ಏಕೆಂದರೆ ರೇವಣ್ಣನವರು ಕೂಡ ಏನು ಹೇಳಿದರು ಎಂದರೆ ಸೆಕ್ಷನ್ 307 ಎಂದು ಹೇಳಿ 1984 ರಲ್ಲಿ ಹಾಕಿದ್ದರು. ಆಮೇಲೆ he was elected . In fact he morallly not bound to resign. ಆದರೂ ಕೂಡ ಈ ಎಲ್ಲಾ ಕೇಸ್ ಗಳು ಇತ್ಯರ್ಥವಾಗುವವರೆಗೆ ನಾನು ಹೊರಗೆ ಇರುತ್ತೇನೆ.ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದರು. ಏಕೆಂದರೆ, ಜನರಿಗೆ ನೋಡಲಿಕ್ಕೆ 307 ಎನ್ನುವುದು attempt to murder case ಇದೆ. ಆದ್ದರಿಂದ ಇವತ್ತು ವಿಶೇಷವಾದಂಥ ಒಂದು ದಾಳಿ ಪತ್ರಿಕೆಗಳಿಂದ ಬರಬಹುದು ಅಥವಾ ಸಾರ್ವಜನಿಕರಿಂದ ಬಂದಂತಹ ಸಂದರ್ಭದಲ್ಲಿ ನಾವು ಏಕೆ ಇರಬೇಕು ಎನ್ನುವ ಸಧ್ಭಾವನೆಯಿಂದ ಅವರು ಮಾಡಿರತಕ್ಕದ್ದೇ ಹೊರತು I have not asked him to resign. ಆದ್ದರಿಂದ ಇದರ ಬಗ್ಗೆ ಬಹಳ ವ್ಯಾಪಕವಾಗಿ ಚರ್ಚೆ ಮಾಡಬೇಕಾದರೆ ಮುಂದೆ ಇನ್ನು ಕೆಳಗೆ ಬರುತ್ತದೆ. ಕೇಸ್‌ಗಳು ಇರುವಂತ ಶಾಸಕರು

ಶಾಸಕರಾಗಿ ಇರಬಾರದು ಎಂಬುದು ಬರುತ್ತದೆ.ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂತ ನಾವೆಲ್ಲರೂ ಆಲೋಚನೆ ಮಾಡಬೇಕು . ಈ ಕಡೆಯವರಿರಬಹುದು ನಾಳೆ ಆ ಕಡೆಯವರಿರಬಹುದು. ಕೊನೆಗೆ ಕೇಸ್ ಹಾಕುವುದೇ ರಾಜಕೀಯ ಅಸ್ತ್ರವೆಂದು ಒಬ್ಬರನ್ನು ತೇಜೋವಧೆ ಮಾಡತಕ್ಕಂತಹ ಪ್ರವೃತ್ತಿಯಿಂದ ನಾವು ಇದಕ್ಕೆ ವ್ಯಾಪಕವಾದ ವ್ಯಾಖ್ಯಾನ ಮಾಡುವುದಕ್ಕೆ ಹೋದರೆ ಬಹುಶಃ ಇದು ದುರುದ್ದೇಶದ ಒಂದು ದೊಡ್ಡ ರಾಜಕೀಯ ಅಸ್ತ್ರವಾಗುತ್ತದೆ. ಆಗ ಇದಕ್ಕೆ ಎರಡು ಕಡೆ ಅಲಗು ಬರುತ್ತದೆ. It is a two edged wepon. ಆದ್ದರಿಂದ ದಯಮಾಡಿ ಇದರ ಬಗ್ಗೆ ಚರ್ಚೆ ಮಾಡದೆ ನಿಜವಾದಂತಹ ಕೇಸ್ ಇದ್ದರೆ moral turpitude ನಲ್ಲಿ ಒಂದು ವೇಳೆ I can very well understand perticulerly ಒಂದು ವೇಳೆ ಎಲಕ್ಷನ್ ಆದಮೇಲೆ ,ಮಂತ್ರಿಗಳಾದಮೇಲೆ ಏನಾದರೂ ಅಫೆನ್ಸ್ ಮಾಡಿದರೆ ಅಥವಾ ಏನಾದರೂ ಅವರ ಮೇಲೆ ಕೇಸ್ ಬಿದ್ದರೆ I can very well understand. ಆದರೆ ಇದೆಲ್ಲವನ್ನು ಕೂಡ ಒಂದೇ ಕಾರ್ಪೆಟ್ ಹಾಕಿ ನಾವು ಜನಗಳನ್ನು ತೊಂದರೆ ಮಾಡಲಿಕ್ಕೆ ಹೊರಟರೆ ಬಹುಶಃ ಇದು ವಿಶೇಷವಾಗಿ ನಮಗೇ ತಿರುಗುಬಾಣವಾಗುತ್ತದೆ. Yes, after any one of our collegues have become Ministers and if they have commited any criminal acts. ಅಥವಾ ಏನಾದರೂ ಕೇಸ್ ಇದ್ದರೆ I can very well understand.ಇದು ಬಹಳ ವರ್ಷಗಳಿಂದ ಇದೆ 1980 ರದ್ದು, 1981ರದ್ದು 1984ರದ್ದು, 1985ರ ಕೇಸ್ ಇದೆ ಅದು ಮುಗಿಯುವುದೇ ಇಲ್ಲ. ಏಕೆಂದರೆ ಯಾರು ಯಾರು ಪ್ರಯತ್ನ ಮಾಡಿದ್ದಾರೆ,ಎಲ್ಲಾ ವಿತ್ ಡ್ರಾ ಮಾಡಿರುತ್ತಾರೆ. in the natural course, police in their usual course in duty, in administration, they have submitted, without anybody's influence. ಯಾರು ಪ್ರಭಾವ ಇದ್ದರು ಎಂಬ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದು ಸೂಕ್ತವಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, That is exactly what becomes relevant. ಪ್ರೊ. ಎಂ.ಡಿ.ನಂಜುಂಡಸ್ವಾಮಿ :- 1984ರ ಕೇಸ್ ಇರಬಹುದು. ಆದರೆ, ಯಾವತ್ತು 'ಬಿ' ರಿಪೋರ್ಟ್ ಹಾಕಿದರು ಎನ್ನುವುದು ಅತಿ ಮುಖ್ಯ. ಮಂತ್ರಿಗಳಾದ ಮೇಲೆ 'ಬಿ' ಹಾಕುತ್ತಾರೆ. ಅಲ್ಲಿಯೇ ಜನಕ್ಕೆ ನಿಮ್ಮ ಬಗ್ಗೆ ವಿಶ್ವಾಸ ಹೋಗುವುದು. 1984ರಲ್ಲೋ ಅಥವಾ ಯಾವತ್ತೋ ಕೇಸ್ ಹಾಕಿರಬಹುದು. ಇಲ್ಲಿ ಫೆಬ್ರವರಿ 1993ರಲ್ಲಿ 'ಬಿ' ರಿಪೋರ್ಟ್ ಫೈಲು ಮಾಡುತ್ತೀರಿ, ಅಲ್ಲಿಯೇ ನೀವು ವಿಶ್ವಾಸ ಕಳೆದುಕೊಳ್ಳುವುದು. That is why I wanted to know the dates on which the "B" reports are filed. ಯಾವತ್ತೋ ಮಾಡಿರಬಹುದು, ಯಾವಾಗ 'ಬಿ' ರಿಪೋರ್ಟ್ ಆಯಿತು, ಆ 'ಬಿ' ರಿಪೋರ್ಟ್ ಮೇಲೆ ನಾವು ಈಗ ಹೈಕೋರ್ಟ್‌ಗೆ ಹೋಗಬೇಕಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ ತಾವು ಹೇಳಿದ್ದುದು ಸರಿ. ರಾಮಲಿಂಗರೆಡ್ಡಿ ಮತ್ತು ಎ.ಕೃಷ್ಣಪ್ಪ .....

(INTERRUPTIONS)

ಶ್ರೀ ಬಿ.ಹೆಚ್.ಬನ್ನಿಕೋಡ್ :- ನಿಮ್ಮ ಕಾಂಗ್ರೆಸ್ ಸರ್ಕಾರ ಬಂದಮೇಲೆ ಈ 'ಬಿ' ರಪೋರ್ಟ್ ಆಗಿವೆ.

Prof. M.D.NANJUNDASWAMY :- "B" reports have been filed only after the Hon'ble Members became Ministers or they became Legislators. Even as Legislators ನಾವು 'ಬಿ' ರಿಪೋರ್ಟ್ ಫೈಲು ಮಾಡಿಸಿಕೊಳ್ಳಬಾರದು. ಈದೇಶದಲ್ಲಿ [illegible] ಇದೆ ಎನ್ನುವುದಾದರೆ, We should face

trial on an equal footing. ಬರೀ ಮಂತ್ರಿಗಳಾದ ಮೇಲೆ ಅಲ್ಲ; ಶಾಸಕರಾಗಿ ಬಂದಮೇಲೆಯೂ 'ಬಿ' ರಿಪೋರ್ಟ್‌ಗಳು ಹೋಗುತ್ತವೆ.

ಶ್ರೀ ಎಂ.ವೀರಪ್ಪ ಮೊಯಿಲಿ :- ಇಲ್ಲಿ ಒಂದು ವಿಚಾರ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ಯಾರ ಹಸ್ತಕ್ಷೇಪದ ಮುಖಾಂತರ 'ಬಿ' ರಿಪೋರ್ಟ್ ಸಲ್ಲಿಕೆಯಾಗಿಲ್ಲ. ರಾಮಲಿಂಗರೆಡ್ಡಿ ಮತ್ತು ಕೃಷ್ಣಪ್ಪ ಅವರ ಬಗ್ಗೆ 'ಬಿ' ರಪೋಟಟ್‌ಕೊಟ್ಟಂಥ ವಿವರಗಳನ್ನು ನಾನು ಇನ್ನೊಮ್ಮೆ ಈ ಸಭೆಗೆ ಕೊಡುತ್ತೇನೆ. ಈ ವಿವರ ಸಧ್ಯ ನನ್ನ ಹತ್ತಿರ ಇಲ್ಲ. ಅದರ ಪೂರ್ಣ ವಿವರವನ್ನು ಈ ಸಭೆಗೆ ಕೊಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ :- ಮಾನ್ಯ ಅಧ್ಯಕ್ಷರೇ, ನಾನು ಕೇಳಿದೆ, ಗೋಪಿನಾಥ ಸಾಂಡ್ರರವರ 'ಬಿ' ರಿಪೋರ್ಟ್‌ನ್ನು ದೂರುದಾರರು ಕೋರ್ಟಿನಲ್ಲಿ ಪುನಃ ಚಾಲೆಂಜ್ ಮಾಡಿದ್ದಾರೆ. ಇದನ್ನು ಕೋರ್ಟ್ ಕೂಡ ಒಪ್ಪಿಕೊಂಡಿದೆ. ಪೋಲೀಸಿನವರು ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿದ್ದರು ಮತ್ತು ಇದನ್ನು ಪುನಃ ಚಾಲೆಂಜ್ ಮಾಡಿದ್ದಾರೆ, ಕೋರ್ಟ್ ಕೂಡ ಒಪ್ಪಿದೆ. ಇದನ್ನು ಮತ್ತೆ ಪರಿಶೀಲನೆ ಮಾಡುವುದಕ್ಕೆ ಕೋರ್ಟಿನಲ್ಲಿ ತಗೆದುಕೊಂಡಿದ್ದಾರೆ. ಇದು ನ್ಯಾಯಾದಲ್ಲಿರುವುದರಿಂದ, ಮಂತ್ರಿಮಂಡಲದಿಂದ ಅವರನ್ನು ಕೈಬಿಡುತೀರ ? ಇದನ್ನು ಏಕೆ ಹೇಳುತ್ತಿದ್ದೇನೆಂದರೆ ರೇವಣ್ಣನವರ ವಿಷಯವೂ ನ್ಯಾಯಾಲಯದಲ್ಲಿದೆ. I want your standard answer.

ಶ್ರೀ ಕೆ.ಎಸ್.ಈಶ್ವರಪ್ಪ :- ಅದರಲ್ಲಿ ನನ್ನ ಹೆಸರು ಬಂದಿದೆ, ಒಂದೇ ಒಂದು ಪ್ರಶ್ನೆ.

ಶ್ರೀ ಎಂ.ವೀರಪ್ಪ ಮೊಯಿಲಿ :- ಎ.ಕೃಷ್ಣಪ್ಪನವರ 'ಬಿ' ರಪೋರ್ಟ್ ಕೊಟ್ಟಿದ್ದು 16-10-89ರಲ್ಲಿ, ಅದಕ್ಕೆ ನಾನು ವಿವರ ನಂತರ ಕೊಡುತ್ತೇನೆಂದು ಹೇಳಿದೆ. Accepted by the court on 9-2-93. ನಾವು ಅಧಿಕಾರಕ್ಕೆ ಬಂದಮೇಲೆ 'ಬಿ' ರಿಪೋರ್ಟ್ ಕೊಟ್ಟಿದ್ದಲ್ಲ. ಕೋರ್ಟಿಗೆ 1989ರಲ್ಲೇ 'ಬಿ' ರಿಪೋರ್ಟ್ ಕೊಡಲಾಗಿದೆ. And the court accepted on 9-2-93. ಅದಕ್ಕಾಗಿಯೇ ನಾನು ಈ ವಿವರವನ್ನು ಅನಂತರ ಕೊಡುತ್ತೇನೆಂದು ಹೇಳಿದೆ. ಇದರಲ್ಲಿ ನಾವು ಏನೂ ಮಾಡುವುದಕ್ಕೆ ಹೊರಟಿಲ್ಲ. ಮತ್ತೆ ರಾಮಲಿಂಗರೆಡ್ಡಿಯವರ 'ಬಿ' ರಿಪೋರ್ಟ್ ಕೋರ್ಟಿಗೆ ಸಬ್ಮಿಟ್ ಮಾಡಿದ್ದು According to my information, subject to correction it is in 1991 and accepted by the court of course on 3-2-93. ಈ ವ್ಯತ್ಯಾಸ ಹೇಳಬೇಕೆಂದೇ ನಾನು ಸ್ವಲ್ಪ ಸಮಯ ಕೇಳಿದೆ. ಈಗ ತಾನೇ ಸ್ವಲ್ಪ ವಿವರ ಬಂದು ಅದನ್ನು ಕೊಟ್ಟಿದ್ದೇನೆ. After we came to power, after they became ministers, it is not submitted, ರಿಪೋರ್ಟ್ ಪೋಲೀಸಿನವರು ಕೊಟ್ಟಿಲ್ಲ. ನಾವೇನಾದರೂ ರಿಪೋರ್ಟ್ ತಯಾರು ಮಾಡಿ, ಆಮೇಲೆ ಕೊಟ್ಟಿದ್ದರೆ, ಈ ಪ್ರಶ್ನೆ ಉದ್ಭವವಾಗುತ್ತಿತ್ತು. ಸನ್ಮಾನ್ಯ ಗೋಪಿನಾಥ ಸಾಂಡ್ರರವರ ವಿಚಾರದಲ್ಲಿಯೂ ಕೋರ್ಟಿನಲ್ಲಿದೆ. 'B' Report has been submitted and it has been accepted. Of course, the magistrate has re-opened it and it has been stayed by the High Court. ಏತನ್ಮಧ್ಯೆ, ಇದರ ಬಗ್ಗೆ ನಾನು ಕಾಮೆಂಟ್ ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ.

ಅಧ್ಯಕ್ಷರು :- ಲಿಖಿತ ಮೂಲಕ ನೀಡುವ ಪ್ರಶ್ನೋತ್ತರ ಪಟ್ಟಿ.

ಶ್ರೀ ಕೆ.ಎಸ್.ಈಶ್ವರಪ್ಪ :- ಮಾನ್ಯ ಅಧ್ಯಕ್ಷರೆ ....

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ.....

ಶ್ರೀ ಕೆ.ಎಸ್.ಈಶ್ವರಪ್ಪ :- ಮಾನ್ಯ ಅಧ್ಯಕ್ಷರೆ ನನ್ನ ಹೆಸರು ಬಂದಿದೆ.

ಅಧಕ್ಷರು :- ಒಂದು ನಿಮಿಷ ತಾವು ಕುಳಿತುಕೊಳ್ಳಿ. ತಾವು ಬೇರೆ ಸ್ಟೇಟ್‌ಮೆಂಟ್ ಕೊಡಿ, ನಾನು ಅವಕಾಶ ಮಾಡಿ ಕೊಡುತ್ತೇನೆ. ಈಗ ತಾವು ಕುಳಿತುಕೊಳ್ಳಿ.....

ಶ್ರೀ ವೈ.ಕೆ.ರಾಮಯ್ಯ :- ಮಾನ್ಯ ಅಧ್ಯಕ್ಷರೆ ....

ಅಧಕ್ಷರು :- ತಾವು ಕುಳಿತುಕೊಳ್ಳಿ.....

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ಮಾನ್ಯ ಅಧ್ಯಕ್ಷರೆ ದಿನಾಂಕ 9-3-93ರ ಲಿಖಿತ ಮೂಲಕ ನೀಡಲಾಗುವ ಪ್ರಶ್ನೆಗಳ ಪಟ್ಟಿಯನ್ನು ಮಂಡಿಸಿದ್ದೇನೆ....

(ಗೊಂದಲ)

ಶ್ರೀ ವೈ.ಕೆ.ರಾಮಯ್ಯ :- ಮಾನ್ಯ ಅಧ್ಯಕ್ಷರೆ, ನನ್ನ ಹೆಸರು ಈ ಪಟ್ಟಿಯಲ್ಲಿ ಬಂದಿದೆ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ದಯಮಾಡಿ ಅವಕಾಶ ಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ :- ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಪಠ್ಯಪುಸ್ತಕಗಳ ಅಭಾವ ಇತ್ತು. ಆಗ ಜನತಾದಳ ಸರ್ಕಾರವಿತ್ತು. ನಾವು ಬಿ.ಜೆ.ಪಿ ವತಿಯಿಂದ ಪ್ರತಿಭಟನೆ ಮಾಡಿ ಮೆರವಣಿಗೆ ಮಾಡಿದೆವು. ಯಾರೂ ಪಠ್ಯಪುಸ್ತಕಗಳನ್ನು ಕೊಡಲಿಲ್ಲ. ಅವರ ಮೇಲೆ ಕೇಸ್ ಹಾಕಲಿಲ್ಲ. ಪಠ್ಯಪುಸ್ತಕಗಳನ್ನು ಕೊಡಿ ಎಂದು ಕೇಳಿದ ನನ್ನ ಮೇಲೆ ಕೇಸ್ ಹಾಕಿದರು. ನಾವು ಡಿ ಡಿ ಪಿ ಐ ಆಫೀಸಿಗೆ ಹೋಗಿ ಬೀಗ ಹಾಕಿದೆವು. ಅದಕ್ಕೆ ನನ್ನ ಮೇಲೆ ಸುಳ್ಳು ಕೇಸ್ ದಾಖಲು ಮಾಡಿದ್ದಾರೆ. ಅಧಿಕಾರಿಗಳ ಮೇಲೆ ಕೇಸ್‌ಹಾಕಿ ಜೈಲಿಗೆಹಾಕಬೇಕಾಗಿತ್ತು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಸರ್ಕಾರ ಈ ರೀತಿ ಪಟ್ಟಿ ಕೊಟ್ಟು ಕೆ.ಎಸ್.ಈಶ್ವರಪ್ಪ ಕ್ರಿಮಿನಲ್ ಎಂದು ತೋರಿಸುತ್ತಿದ್ದಾರೆ. ನಾನೇನೂ ಕೊಲೆ ಮಾಡಿಲ್ಲ ಅತ್ಯಾಚಾರ ಮಾಡಿಲ್ಲ. ಪಠ್ಯ ಪುಸ್ತಕಗಳು ಸಿಕ್ಕಿಲ್ಲ ಎಂದು ಪ್ರತಿಭಟನೆ ಮಾಡಿದೆವು ಅಷ್ಟೆ. ಏನು ಕಥೆ ಇದು. ಸರ್ಕಾರ ಇದರ ಬಗ್ಗೆ ಏನು ಹೇಳಿಕೆ ಕೊಡುತ್ತದೆ.

ಅಧಕ್ಷರು :- ಇದು ಪ್ರಶ್ನೆಗೆ ಸಂಬಂಧ ಪಟ್ಟದೆಯೇ.

ಶ್ರೀ ಕೆ.ಎಸ್.ಈಶ್ವರಪ್ಪ :- ಈ ಪಟ್ಟಿಯಲ್ಲಿ ನನ್ನ ಹೆಸರು ಇದೆ. 1987ರಲ್ಲಿ ಪಠ್ಯಪುಸ್ತಕ ಕೊರತೆ ಇತ್ತು. ಆಗ ಪ್ರತಿಭಟನೆ ಮಾಡಿದ್ದು.....

ಶ್ರೀ ಬಸವರಾಜರಾಯರೆಡ್ಡಿ :- ಮಾನ್ಯ ಅಧಕ್ಷರೆ, ನನ್ನ ಪ್ರಶ್ನೆಗೆ ಮಾನ್ಯಮುಖ್ಯಮಂತ್ರಿಗಳಿಂದ ಉತ್ತರ ಬರಲಿಲ್ಲ.

ಡಾ. ಜೀವರಾಜ ಆಳ್ವ :- ಮಾನ್ಯ ಅಧ್ಯಕ್ಷರೆ, ಒಂದು ಮಹತ್ವವಾದ ಪ್ರಶ್ನೆಯನ್ನು ಮಾನ್ಯ ಸಧಸ್ಯರಾದ ಬಸವರಾಜರಾಯರೆಡ್ಡಿಯವರು ಎತ್ತಿದ್ದಾರೆ. ಅದೇನೆಂದರೆ ಗೋಪಿನಾಥ ಸಾಂಡ್ರ ಅವರನ್ನು ಮಂತ್ರಿ ಮಂಡಲದಿಂದ ಕೈ ಬಿಡುತ್ತೀರಾ ಅಥವಾ ತೆಗೆದುಕೊಳ್ಳುತ್ತೀರ ಎಂದು ಕೇಳಿದರು.

ಅದಕ್ಕೆ ತಾವು ಉತ್ತರ ಹೇಳಲಿಲ್ಲ. ಒಂದು ವೇಳೆ ಅವರನ್ನು ತೆಗೆಯದಿದ್ದರೆ If you have to apply the same yardstick, why don't you induct Mr.Revanna back? ಒಂದು ಮಾತು. ಏಕೆಂದರೆ, This is an academic question I raise. ಶಾಸಕರಿಗೂ ಮಂತ್ರಿಗಳಿಗೂ ವ್ಯತ್ಯಾಸ ಇದೆ. ಶಾಸನ ಸಭೆಯ ಸದಸ್ಯರಾಗಿ ನಾವು ಪ್ರಜಾಪ್ರಭುತ್ವದ ಮೇಲೆ We take an oath. ಜನತೆಯ ಮೇಲೆ ಪ್ರತಿಜ್ಞೆ ತೆಗೆದು ಕೊಳ್ಳುತ್ತೇವೆ. As a minister, you take an oath on the Constitution of this country. ಇವತ್ತು 'ಬಿ' ರಿಪೋರ್ಟ್ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಮಾನ್ಯ ನಂಜುಂಡಸ್ವಾಮಿಯವರು ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈಗ ನಮ್ಮ ವಿಶ್ಲೇಷಣೆಯನ್ನು ನಾವು ಟೀಕೆ ಮಾಡಿಕೊಂಡು ಹೋದರೆ ವಾಟಾಳ್ ನಾಗರಾಜ್‌ರವರು ಅವರ ಜೀವಮಾನದಲ್ಲಿ ಮಂತ್ರಿಗಳಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರ ಮೇಲೆ ಅಷ್ಟೊಂದು ಕೇಸಸ್ ಇದೆ. ಮಾನ್ಯ ಅಧ್ಯಕ್ಷರೆ ನಾನು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಮೇಲೂ ಒಂದು ಕೇಸನ್ನು ಹಿಂದಿನ ಕಾಂಗ್ರೆಸ್ ಸರ್ಕಾರ ಹಾಕಿತ್ತು. ಯಾವುದು ಅಂದರೆ, 'Attempt to murder Indira Gandhi. Snatching of a revolver. ನಾನು ಬಹಳ ಕಷ್ಟ ಪಟ್ಟು I went through the ordeal of going through the case for almost 4 years and got myself acquitted. That I don't question. ಶಾಸಕರಾಗಿ ಈ ಕೆಲಸ ಮಾಡಬೇಕಾಗುತ್ತದೆ. ಆದರೆ ಸಂವಿಧಾನ ಬದ್ಧವಾಗಿ when you take an oath of office on the Constitution of India, there is a ray of doubt against the minister. ಇವತ್ತು ಈ ಮಾತನ್ನು ಏಕೆ ಹೇಳುತ್ತಿದ್ದೇನಂದರೆ, We wanted to give a grace to that Minister. ಏಕೆಂದರೆ ನಾವೆಲ್ಲಾ ಕನ್ನಡಿ ಕಟ್ಟಿದವರಲ್ಲಿ ಕುಳಿತು ಕೊಂಡಿದ್ದೇವೆ. ಕಲ್ಲು ಹೊಡೆದರೆ ನಾಳೆ ಅದು ನಮ್ಮ ಮೇಲೆ ಕೂಡ ಬೀಳಬಹುದು. ಇದು ಬಹಳ ಗುರುತರವಾದ ಪ್ರಶ್ನೆ. ನಾನು ಹೇಳುತ್ತೇನೆ. ನಿಮ್ಮನ್ನು ಇವತ್ತು ನಮ್ಮ ಒಬ್ಬ ಕೌನ್ಸಿಲ್ ಸದ್ಯಸರ ಮೇಲೆ ನಿಮ್ಮನ್ನು ಹಾಳು ಮಾಡುತ್ತೇವೆ. ನಿಮ್ಮನ್ನು ಲಿಕ್ವಿಡೇಟ್ ಮಾಡುತ್ತೇವೆಂದು ಹೇಳುವಂಥ ಧೈರ್ಯ, ಕೆಚ್ಚು ಬರಬೇಕಾದರೆ ಇವರು ಮಂತ್ರಿಯಾಗಿದ್ದರಿಂದ ಕೊಲೆ ಮಾಡುತ್ತೇವೆಂದು ಬರುತ್ತಾರೆ. ಮಾನ್ಯ ಸದಸ್ಯರಾದ ಬಸವರಾಜರಾಯರೆಡ್ಡಿಯವರು ನನ್ನನ್ನು ಕೇಳಿದರು. ಇದನ್ನು ಪ್ರಶ್ನೆ ರೂಪದದಲ್ಲಿ ಎತ್ತ ಬೇಕೋ ಅಥವಾ ಬಜೆಟ್ ಭಾಷಣದಲ್ಲಿ ಮಾತನಾಡುವಾಗ ಎತ್ತಬೇಕೋ ಎಂದು ಕೇಳಿದರು. ಏಕೆಂದರೆ ಇದು ಬಹಳ ಗುರುತರವಾದ ಪ್ರಶ್ನೆ. There is a clear difference between Mr.Revanna's case and a case of Mr.Sandra. Mr.Sandra is accused for whatever reason. Because he is in the Government, probably he brought in some pressure and "B" Report has been filed. Now even that "B" Report has been questioned. Morally and ethically the Minister is bound to resign and after this whatever ugly episode we saw, almost black-mailing of another Legislator from the Council, ಶ್ರೀ ಗೋಪಿನಾಥ ಸಾಂಡ್ರಾರವರು ರಾಜೀನಾಮೆ ಕೊಡಬೇಕು. ಗೋಪಿನಾಥ ಸಾಂಡ್ರಾರವರು ರಾಜೀನಾಮೆ ಕೊಡದಿದ್ದರೆ if it is a same yardstick ಮಾನ್ಯ ಮುಖ್ಯಮಂತ್ರಿಗಳು ಎಲ್ಲರೂ ಸಜ್ಜನರು, ಎಲ್ಲರೂ ಚೆನ್ನಾಗಿದ್ದಾರೆ ಎಂದರೆ 'ರೇವಣ್ಣನವರನ್ನೂ ವಾಪಸ್ಸುತೆಗೆದುಕೊಳ್ಳಿ ಇಲ್ಲದಿದ್ದರೆ It is very ethical and a very clear question.

SRI HARNAHALLI RAMASWAMY : The question Hour is being converted into a discussion hour. I am sorry. ತಮಗೆ ಅಫೀಲ್ ಮಾಡಿಕೊಳ್ಳುತ್ತಿದ್ದೇನೆ.

ಇದನ್ನು ಅಲೋ ಮಾಡುವುದಕ್ಕಾಗುವುದಿಲ್ಲ. ಇದನ್ನು ಜೀರೋ ಅವರ್‌ನಲ್ಲಿ ಎತ್ತಿ.

(INTERRUPTIONS)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಪ್ರಶ್ನೆ ಇದೆ. ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತು ಹೇಳಿದರು. ಇದರ ಬಗ್ಗೆ ಡಿಬೇಟ್ ಆಗಬೇಕು. Moral turpitude ಇದ್ದರೆ ಮಿನಿಸ್ಟರಿಂದ ರೆಸಿಗ್ನೇಷನ್ ತಾವು ತೆಗೆದುಕೊಳ್ಳಬಹುದು. ಮಿಲಿಸ್ಟರ್ ಆದ ನಂತರ ಅಪರಾಧ ಮಾಡಿದ್ದರೆ ತೆಗೆದುಕೊಳ್ಳಬಹುದು. ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಇದರ ಮೇಲೆ ಡಿಬೇಟ್ ಆಗಬೇಕಾಗಿದೆ. ಯಾವ ಸರ್ಕಂಸ್ಟೆನ್ಸಸ್‌ನಲ್ಲಿ ಮಿನಿಸ್ಟರ್ ಅರ್ಹತೆ ಕಳೆದು ಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಡಿಬೇಟ್ ಆಗಬೇಕು. ಇದರಲ್ಲಿ ಯಾವುದೇ ಸಂದೇಹವಿಲ್ಲ. ಎರಡನೆಯದು ಮಿನಿಸ್ಟರ್ ಆದ ನಂತರವೂ ಅವರ ಪಾಸ್ಟ್ ಹಿಸ್ಟರಿಯಲ್ಲಿ ಯಾವುದಾದರೂ charges of corruption ಇದ್ದರೆ ಅಥವಾ ಮಾರಲ್ ಸಂಬಂಧ ಇದ್ದರೆ he has also to resign. ಮಿನಿಸ್ಟರ್ ಆದ ನಂತರ ಅಫೆನ್ಸ್ ಮಾಡಿದ್ದರೆ ಎಂದು ಏನೂ ಇಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಕೆಲವು ಸಚಿವರ ಬಗ್ಗೆ ಎಕ್ಸ್‌ಪ್ಲನೇಷನ್ ಕೊಟ್ಟರು. ಇಲ್ಲಿ ಕಲವು ಎಂ.ಎಲ್.ಎ ಬಗ್ಗೆಯೂ ಹಾಕಿದ್ದಾರೆ. ಎಂ.ಎಲ್.ಎಗಳನ್ನು ಇನ್‌ವಾಲ್ವ್ ಮಾಡಿದ್ದಾರೆ. ಇಂಥ ಕೇಸ್‌ಗಳು ಎಂ.ಎಲ್.ಎ. ವಿರುದ್ಧ ಇವೆ ಎಂದು ಇದೆ. Tomorrow in the press wrong signals will go. ಇಂತಿಂಥ ಎಂಎಲ್‌ಎಗಳ ಮೇಲೆ ಇಂತಿಂಥ ಕೇಸ್ ಇವೆ ಎಂದು. ಮುಖ್ಯಮಂತ್ರಿಯವರು ಸಚಿವರನ್ನು ಡಿಫೆಂಡ್ ಮಾಡಿದರು, ಬಿ ರಿಪೋರ್ಟ್ ಆಗಿದೆ, ಮತ್ತೊಂದು ಆಗಿದೆ ಎಂದು. ಹಾಗಾದರೆ ಶಾಸಕರನ್ನು ಡಿಫೆಂಡ್ ಮಾಡುವವರು ಯಾರು? ಇದರ ಬಗ್ಗೆ ಒಂದು ಚರ್ಚೆಯಾಗಬೇಕು. ತಾವು ಚರ್ಚೆ ಮಾಡಲಿಕ್ಕೆ ಹಾಫ್ ಅನ್ ಅವರ್ ಡಿಸ್ಕಷನ್ ಅವಕಾಶ ಮಾಡಿಕೊಡಿ. ಎಂ.ಎಲ್.ಎಗಳಿಗೂ ಚರ್ಚೆಗೆ ಅವಕಾಶ ಕೊಡಬೇಕು. ಏಕೆಂದರೆ ಅವರು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಯಾವ ಸರ್ಕಂಸ್ಟೆನ್ಸಸ್‌ನಲ್ಲಿ ಅವರ ಮೇಲೆ ಕೇಸ್ ಹಾಕಿದ್ದಾರೆ. ನಾವು ಅಪೋಸಿಷನ್‌ನಲ್ಲಿ ಇದ್ದೇವೆ. ನಾವು ಅಜಿಟೇಷನ್ ಮಾಡುವಾಗ ನಮ್ಮ ಮೇಲೆ ಹಾಕುತ್ತಾರೆ. ಆ ಕೇಸ್ ನಾಳೆ ಬಂದರೆ ಏನಾಗುತ್ತದೆ. ಈಗ ನೋಡಿ, ಮಂಜುನಾಥ್ 353,354 they are all serious. ಹೆಚ್.ಕೆ.ಪಾಟೀಲ್ it is under--333,334,334 hurt 354 Assault. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇದರಲ್ಲಿ wrong signals ಹೋಗುವುದು ಬೇಡ. ಮಾನ್ಯ ಮುಖ್ಯಮಂತ್ರಿಯವರು ಕೇವಲ ಸಚಿವರನ್ನಷ್ಟೆ ಡಿಫೆಂಡ್ ಮಾಡಿದರು. ಇದರಲ್ಲಿ ಎಂ.ಎಲ್.ಎಗಳ ಇನ್‌ವಾಲ್ವ್‌ಮೆಂಟ್ ಇದೆ. ಆದ್ದರಿಂದ ಎಂ.ಎಲ್.ಎಗಳು ಎಕ್ಸ್‌ಪ್ಲನೇಷನ್ ಮಾಡುವುದಕ್ಕೆ ಅವಕಾಶ ಸಿಗಬೇಕು. ಎಂ.ಎಲ್.ಎಗಳ ಮೇಲೆ ಏಕೆ ಕೇಸ್ ಹಾಕಿದ್ದಾರೆಂದು ನಾಳೆ ಜನಕ್ಕೆ ಗೊತ್ತಾಗಬೇಕಾಗಿದೆ. ಸಾಧ್ಯವಾದರೆ ಚರ್ಚೆಮಾದಲು ಇವತ್ತೇ ಅವಕಾಶ ಮಾಡಿಕೊಡಬೇಕು. ಇಲ್ಲವೆಂದರೆ ಪತ್ರಿಕೆಯಲ್ಲಿ ರಿಪೋರ್ಟಿಂಗ್ ಸರಿಯಾಗಿ ಆಗಲಿಲ್ಲವೆಂದರೆ ನಾಳೆ ಅವರ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಅವರು ಮುಖ ತೋರಿಸುವುದಕ್ಕಾಗುವುದಿಲ್ಲ. ಹಾಗಾಗಿ ಅವರೂ ಸಹ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಯಾವ ಸರ್ಕಂಸ್ಟೆನ್ಸಸ್‌ನಲ್ಲಿ ಅವರ ಮೇಲೆ ಕೇಸ್‌ರಿಜಿಸ್ಟರ್ ಆಗಿವೆಯೆಂದು ಗೊತ್ತಾಗಬೇಕು. ನಮ್ಮ ರಾಯರೆಡ್ಡಿಯವರು ಏನು ಪ್ರಶ್ನೆ ಎತ್ತಿದ್ದಾರೆ . ಅದು ಬಹಳ ಮಹತ್ವದ್ದು ಇದೆ. ಒಂದು ಕಡೆ ಸಾಂಡ್ರಾರವರು ಬಿ ರಿಪೋರ್ಟ್ ಹಾಕಿದ್ದಾರೆ. ಮತ್ತೊಂದು

ಕಡೆ ಆ ಕೇಸ್‌ನ್ನು ರೀ ಓಪನ್ ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಆ ಸರ್ಕಂಸ್ಟೆನ್ಸಸ್‌ನಲ್ಲಿ whether a minister would continue, you have to answer. ಈಗ ಯಾವ ಯಾರ್ಡ್‌ಸ್ಟಿಕ್‌ನ್ನು ರೇವಣ್ಣನವರಿಗೆ ಅಪ್ಲೈಮಾಡಿದಿರಿ ಅದೇ ಯಾರ್ಡ್‌ಸ್ಟಿಕ್‌ನ್ನು ಇವರಿಗೂ ಅಪ್ಲೈ ಮಾಡಬೇಕಾಗುತ್ತದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣವನ್ನು ಈ ಕೇಸ್‌ನಲ್ಲೂ ಕೊಡಬೇಕಾಗುತ್ತದೆ. ಇಲ್ಲವೆಂದರೆ ನಿಮಗೇ conscience will prick that you have done injustice to somebody. ಹಾಗಾಗಿ ನಾನು ಇಷ್ಟೇ ಹೇಳುತ್ತಿದ್ದೇನೆ. ಇದರ ಬಗ್ಗೆ ಹಾಫ್-ಅನ್-ಅವರ್ ಡಿಸ್ಕಷನ್‌ಗೆ ತಾವು ಅಲೋ ಮಾಡಿರಿ. ಇದರಲ್ಲಿ ಯಾರ ಯಾರ ಹೆಸರುಗಳು ಇರುತ್ತವೆಯೋ ಅವರಿಗೆ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಕೊಡಿ. Let them explain under what circumstances these cases have been filed. ಮಾನ್ಯಮುಖ್ಯಮಂತ್ರಿಯವರೂ ಸಹ ಸ್ಪಷ್ಟನೆ ನೀಡಬೇಕಾಗುತ್ತದೆ. ಈ 'ಬಿ' ರಿಪೋರ್ಟ್ ಬಗ್ಗೆ ಏನಿದೆ ಅದು ಸ್ಯಾಟಿಸ್‌ಫ್ಯಾಕ್ಟರಿ ಇಲ್ಲ. ಅದರ ಬಗ್ಗೆಯೂ ಸ್ಪಷ್ಟನೆ ನೀಡಬೇಕಾಗುತ್ತದೆ ಮತ್ತು ಸಾಂಡ್ರಾರವರ ವಿಚಾರದಲ್ಲೂ ನೀವು ಸ್ಪಷ್ಟನೆ ನೀಡಬೇಕು. ಮೇಲಿನ ಮನೆಯ ಸದಸ್ಯರಾದ ಹೊರಟ್ಟಿಯವರಿಗೆ ಯಾವ ಪ್ರಕಾರ ತ್ರೆಟ್ ಆಯಿತು? I never said the Minister has done it, nor Mr.Horatti has alleged against the Minister but he is the supporter of the minister. ಈ ಪ್ರಕಾರ ತ್ರೆಟ್ ಮಾಡಿದರೆ ನಾವು ಯಾವು ಪ್ರಕಾರ ವಾದ ಮಾಡಬೇಕು? ಇಲ್ಲಿ ಯಾವ ವರ್ಕ್ ಮಾಡಲಿಕ್ಕೆ ಆಗುವುದಿಲ್ಲ, ಯಾವ ವಾದ ಮಾಡುವುದಕ್ಕಾಗುವುದಿಲ್ಲ. ಯಾರ ಮೇಲೆ ಆಪಾದನೆ ಮಾಡುವುದು ಕಷ್ಟವಾಗಬಹುದು.

ಅಧ್ಯಕ್ಷರು :- ದೇಶಪಾಂಡೆಯವರೇ,

SRI M.VEERAPPA MOILY :- I am sorry. ಅವರು ಅವರ ಸಪೋರ್ಟ್‌ರ್ಸ್ ಮಾಡಿದರು ಎನ್ನುವುದು all this is baseless. We can attribute to him but he has not done it. He has no part in it.

ಶ್ರೀ ಆರ್.ವಿ.ದೇಶಪಾಂಡೆ :- ಅವರು ಹೇಳುತ್ತಿದ್ದಾರೆ, ಅವರು ಕಾನ್‌ವೊಕೇಷನ್‌ಗೆ ಹೋಗುತ್ತಿದ್ದಾಗ ಅವರನ್ನು ಸ್ಟಾಪ್ ಮಾಡಿ I never said he did it. I said, the Hon'ble member was going for convocation. He has been stopped and he has been threatened. ನೀವು ಹೌಸ್‌ನಲ್ಲಿ ರೈಸ್ ಏಕೆ ಮಾಡಿದಿರಿ, ರೈಸ್ ಮಾಡಿದ್ದರೆ ಹೊಡೆಯುತ್ತೇನೆ ಎಂದು ಸಾಂಡ್ರ ಬಗ್ಗೆ ಹೇಳಿದಾಗ he should be Sandra's supporter or sympathiser. Otherwise, how could he threaten the Hon.Member? ಹಾಗಾಗಿ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಹಾಗೂ ಎಲ್ಲಾ ಸದಸ್ಯರು ಇದರ ಬಗ್ಗೆ ಎಕ್ಸಪ್ಲನೇಷನ್ ಕೊಡಬೇಕಾದರೆ ಚರ್ಚೆಯಾಗಲೇಬೇಕು. Wrong signals should not go to the press.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೆ ಈ ಪಟ್ಟಿಯಲ್ಲಿ ನನ್ನ ಹೆಸರೂ ಇದೆ. ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತಿಲ್ಲ. ಆ ವಿಷಯದಲ್ಲಿ ಸದನದಲ್ಲಿ ಹೇಳಿಕೆ ಮಾಡಲಿಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ನಾನು ಪರಿಶೀಲನೆ ಮಾಡಿ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು:- ವಿಷಯವನ್ನು ನನ್ನ ಗಮನಕ್ಕೆ ತನ್ನಿ. ಆ ಬಗ್ಗೆ ನಾನು ಯೋಗ್ಯವಾಗಿ ಏನು ನೊಡ ಬೇಕೆಂಬುದನ್ನು ನೋಡಿ ನಿರ್ಣಯವನ್ನು ಕೊಡುತ್ತೇನೆ. ತಾವುಗಳೆಲ್ಲರೂ ದಯಮಾಡಿ ಕುಳಿತುಕೊಳಿ. Question Hour is over.

ಶ್ರಿ ವೈ.ಕೆ.ರಾಮಯ್ಯ:- ನನಗೆ ಹೇಳಿಕೆ ಮಾಡುವುದಕ್ಕೆ ತಾವು ದಯಮಾಡಿ ಅವಕಾಶವನ್ನು ಮಾಡಿಕೊಡಿ... ನನಗೆ ಅವಕಾಶ ಕೊಡಿ.....

(ಮಾನ್ಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರು ಅಧ್ಯಕ್ಷರಲ್ಲಿ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಾ ಸದನದ ಸದನದ ಭಾವಿಯ ಕಡೆಗೆ ಬಂದರು.)

(ಗೊಂದಲ)

ಅಧ್ಯಕ್ಷರು :- ನಾನು ಹೇಳಿದ್ದನ್ನು ದಯವಿಟ್ಟು ತಾವು ಕೇಳಿ. ನಾನು ಹೇಳುವುದನ್ನು ತಾವು ಗಮನಕೊಡಬೇಕು. ನಾನು ಅವರಿಗೆ ಏನು ಹೇಳಿದ್ದೇನೆ ಅಂದರೆ, ತಾವು ಕಳುಹಿಸಿಕೊಡಿ ನಾನು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ .

ಶ್ರೀ ಪಿ.ಜಿ.ಆರ್ .ಸಿಂಧ್ಯ:- ಮಾನ್ಯ ಅಧ್ಯಕ್ಷರೆ , ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಎತ್ತಿದ್ದಾರೆ. ಅದರ ಬಗ್ಗೆ ತಮ್ಮ ವಿಚಾರ ಏನು ಎಂದು ಹೇಳಿ . ದಯವಿಟ್ಟು ಇದರ ಬಗ್ಗೆ ತಾವು ಹೇಳಬೇಕು ಸ್ವಾಮಿ.

ಶ್ರಿ ವೈ.ಕೆ.ರಾಮಯ್ಯನವರು ಬಾವಿಯಲ್ಲಿ ನಿಂತು ತಮಗೆ ಹೇಳಿಕೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದರು.

ಅಧ್ಯಕ್ಷರು :- ಶ್ರಿ ವೈ.ಕೆ.ರಾಮಯ್ಯನವರೆ ನಾನು ನಿಮಗೆ ಸ್ಪಷ್ಟವಾಗಿ ಹೇಳಿದ್ದೇನೆ. ತಾವು ಕಳುಹಿಸಿಕೊಡಿ ನಾನು ಪರಿಶೀಲನೆ ಮಾಡಿ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ ತಕ್ಷಣ ನೀವು ಮತ್ತೆ ಹೀಗೆ ಹೇಳುವುದು ಸರಿಯಲ್ಲ. ತಾವು ಏನು ಪ್ರಸ್ತಾಪ ಮಾಡಬೇಕೆಂದಿದ್ದೀರಿ ಅದನ್ನು ನನಗೆ ಬರೆದು ತಿಳುಹಿಸಿ. ನೀವು ಬರೆದು ಕಳುಹಿಸದಿದ್ದರೆ ನನಗೆ ವಿಷಯ ಗೊತ್ತ? ನೀವು ಬರೆದು ಕೊಟ್ಟನಂತರ ನಾನು ಏನೆಂದು ನೋಡಿ ಪರಿಶೀಲನೆ ಮಾಡಬಾರದೆ ?

ಶ್ರಿ ವೈ.ಕೆ.ರಾಮಯ್ಯನವರು ಅವರ ಮೇಲೆ ಏನು ಕೇಸ್ ಹಾಕಿದ್ದಾರೆ ಅದರ ಬಗ್ಗೆ ಹೇಳಲು ಅವರಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಿದ್ದರು .

ಅಧ್ಯಕ್ಷರು :- ಹಾಗಾದರೆ ಅದನ್ನು ಬರೆದು ಕಳುಹಿಸಿಕೊಡಿ. ಅದನ್ನು ನೋಡದೆ ನಾನು ಹೇಗೆ ಹೇಳಲಿ? ತಾವು ಏನು ಮಾತನಾಡುತ್ತೀರಿ ? ಬರೆದು ಕೊಡಿ, ದಯಮಾಡಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಮಾತಿಗೆ ಗೌರವಿಸಿ ಮಾನ್ಯ ಸದಸ್ಯರಾದ

ಶ್ರಿ ವೈ.ಕೆ.ರಾಮಯ್ಯನವರು ತಮ್ಮ ಆಸನಕ್ಕೆ ಹಿಂತುರುಗಿದರು.

ಶ್ರೀ ಬಸವರಾಜ ರಾಯರೆಡ್ಡಿ :-ಮಾನ್ಯ ಅಧ್ಯಕ್ಷರೇ .... ತಾವು ಕುಳಿತುಕೊಳ್ಳಿ ಎಂದು ಹೇಳುತ್ತೀದ್ದೀರಿ ಹಾಗಾದರೆ ನಾವು ಪ್ರಶ್ನೆಗಳನ್ನು ಕೇಳುವುದು ಏತಕ್ಕಾಗಿ ?

ಅಧ್ಯಕ್ಷರು :- ನಾವು ಪುನಃ ಪುನಃ ತಮ್ಮ ಬಗ್ಗೆ ರಿಪೀಟ್ ಮಾಡುವುದು ಸರಿಯಲ್ಲ. ತಾವು ಕುಳಿತುಕೊಳ್ಳಿ ಅಂದರೆ ಕುಳಿತುಕೊಳ್ಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ :-ಮಾನ್ಯ ಅಧ್ಯಕ್ಷರೇ , ಸದಸ್ಯರನ್ನು ಅಷ್ಟು ಲಘುವಾಗಿ ಕಾಣುವುದು ಸರಿಯಲ್ಲ.

MR .SPEAKER :- I am very sorry Mr. Rayareddy. If you say like that then I have to take action.

ಶ್ರೀ ಬಸವರಾಜ ರಾಯರೆಡ್ಡಿ :-ಮಾನ್ಯ ಅಧ್ಯಕ್ಷರೇ, ನಾನು ಏನು ತಪ್ಪು ಮಾಡಿದ್ದೇನೆ ? Am I a sinner ? ಇದು ಹಗುರವಾದ ಮಾತಲ್ಲ.

MR .SPEAKER :- I think we have to take action.

ಶ್ರೀ ಕೆ.ಎಚ್.ರಂಗನಾಥ :- ಮಾನ್ಯ ಸದಸ್ಯರು ಒಂದು ವೇಳೆ ನನ್ನ ಬಗ್ಗೆಯಾಗಲೀ , ಅಥವಾ ಯಾರ ಬಗ್ಗೆಯಾಗಲೀ ಏನಾದರೂ ಹೇಳುವುದು ಇದ್ದರೆ , ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಪರ್ಸನಲ್ ಎಕ್ಸಪ್ಲನೇಷನ್ ಕೊಡಲು ಅವಕಾಶ ಇದೆ. ತಮ್ಮ ಅಪ್ಪಣೆ ಪಡೆದು ನಾವೆಲ್ಲರೂ ಕೂಡ ಹಾಗೆ ಮಾಡಬಹುದು. ನಾವು ಸಮಜಾಯಿಶಿ ಕೊಡಬಹುದು. ಈ ಸದನಕ್ಕೆ ಮತ್ತು ಈ ಸದನದ ಮುಖಾಂತರ ಈ ರಾಜ್ಯದ ಜನರಿಗೆ ಕೂಡ ಹೇಳುವುದಕ್ಕೆ ಸಾಧ್ಯವಿದೆ. ಆದ್ದರಿಂದ ನಾವು ಚೇರನ್ನು ಥ್ರೆಟನ್ ಮಾಡತಕ್ಕಂಥಾದ್ದಾಗಲೀ, ಸದನದ ನಡವಳಿಕೆಯನ್ನು ಡಿಸ್ಪರ್ಬಮಾಡತಕ್ಕಂಥಾದ್ದಾಗಲಿ ಸಾಧುವಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :-ಮಾನ್ಯ ಅಧ್ಯಕ್ಷರೇ , ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು :- ನಾನು ತಮಗೆ ಕುಳಿತುಕೊಳ್ಳಬೇಕೆಂದು ಹೇಳಿದ್ದೇನೆ. ಕುಳಿತುಕೊಳ್ಳಿ ... ತಮಗೆ ಸಮಜಾಯಿಶಿ ಹೇಳುತ್ತೇನೆ...

ಶ್ರೀ ಬಸವರಾಜ ರಾಯರೆಡ್ಡಿ :- ತಾವು ಆಕ್ಷನ್ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ...

ಅಧ್ಯಕರು :-ಆಕ್ಷನ್ ತೆಗೆದುಕೊಳ್ಳುತ್ತೇನೆ ಎಂದು ಏಕೆ ಹೇಳಿದ್ದೇನೆ ಎನ್ನುವುದನ್ನು ಯೋಚಿಸಿ . ತಾವು ಏನು ಹೇಳಿದ್ದೀರಿ ಎಂಬುದು ರಿಕಾರ್ಡನಲ್ಲಿ ಇದೆ.ಸದಸ್ಯರನ್ನು ಅಷ್ಟು ಲಘುವಾಗಿ ಕಾಣಬೇಡಿ ಎಂದು ಹೇಳಿದ್ದೀರಿ ನಾನು ತಮ್ಮಿಂದ ಪಾಠ ಕಲಿಯ ಬೇಕಾಗಿಲ್ಲ. ನಿಮಗಿಂತ ಹೆಚ್ಚು ಅನುಭವ ನನಗೆ ಇದೆ.

ಶ್ರೀ ಎಂ. ಟಿ.ರಾಮಸ್ವಾಮಿ :- -ಮಾನ್ಯ ಅಧ್ಯಕ್ಷರೇ , ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು :- ನಾನು ಆ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ ನಾನು

ರಾಯರೆಡ್ಡಿಯವರು ಮತ್ತು ಮಾನ್ಯ ರಾಮಯ್ಯನವರು ಸದನದ ಹಿರಿಯ ಸದಸ್ಯರುಗಳು. ಮಾನ್ಯ ಅಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಅರ್ಧಗಂಟೆಯ ಚರ್ಚೆಗೆ ನೀವು ಬರೆದು ಕಳುಹಿಸಿದರೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ. ಅಧ್ಯಕ್ಷಸ್ಥಾನದಲ್ಲಿ ಕುಳಿತಿರತಕ್ಕಂತಹವರು ಇದಕ್ಕಿಂತ ಹೆಚ್ಚು ಹೇಳಲಿಕ್ಕೆ ಬರುವುದಿಲ್ಲ. ಈಗ ನಮ್ಮ ಮೇಲೆ ,ball is in our court now. ಬರೆಯ ತಕ್ಕಂಥಾದ್ದಕ್ಕೆ ಪೆನ್ ತಗೆದುಕೊಳ್ಳಬೇಕು ಪೇಪರ್ ತಗೆದುಕೊಳ್ಳಬೇಕು ಬರೆದು ಕಳುಹಿಸಬೇಕು. ಮಾನ್ಯ ಅಧ್ಯಕರು ದಿನ ನಿರ್ಧಾರ ತಗುದುಕೊಳ್ಳುತ್ತಾರೆ. ಇದಕ್ಕೆ ಈ ಒಂದು ಗಡಿಬಿಡಿ ಏತಕ್ಕೆ ಬೇಕು? ದಯವಿಟ್ಟು ಎಲ್ಲರೂ ಸಮಾದಾನದಿಂದ ನಡೆಸಿಕೊಂಡು ಹೋಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ- ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಏನಿದೆ ಅಂದರೆ, ಮಾನ್ಯ ದೇಶಪಾಂಡೆಯವರು ಏನು ಹೇಳಿದ್ದಾರೆ, ಅದಕ್ಕೆ ಪೂರಕವಾಗಿ ಒಂದೇ ವಿಚಾರವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಇಲ್ಲಿ ಏನಾಗಿದೆ ಎಂದರೆ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರತಕ್ಕಂತಹ ಉತ್ತರದಲ್ಲಿ ಸುಮಾರು 39 ಶಾಸಕರುಗಳ ಮೇಲೆ ವಿವಿಧ ಹಂತಗಳಲ್ಲಿ ಮೊಕದ್ದಮೆಗಳನ್ನು ಹಾಕಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಸಿ.ಬೈರೇಗೌಡ :- ಇಲ್ಲಿ ನಮ್ಮ ಸ್ನೇಹಿತರೊಬ್ಬರಿಗೆ ಚಿಂತೆಯಾಗಿಬಿಟ್ಟಿದೆ. ನನ್ನ ಹೆಸರು ಹೇಗೆ ಬಿಟ್ಟು ಹೋಯಿತು ಎಂದು.

ಶ್ರೀ ವಾಟಾಳ್ ನಾಗರಾಜ್ :- ನನಗೆ ಅನುಮಾನ ಬಂತು , ನನ್ನ ಮೇಲೂ ಒಂದೆರಡುಮೂರು ಕೇಸಿತ್ತು ಏಕೆ ಹಾಕಲಿಲ್ಲ ಎಂದು ನನ್ನ ಹಸರೇ ಇಲ್ಲವಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನನ್ನ ವಿಚಾರ ಇಷ್ಟೇ. ಇದರಲ್ಲಿ ಹಲವಾರು ಜನ ಶಾಸಕರ ಮೇಲೆ ಕೇಸ್ ಏನು ಹಾಕಿದ್ದಾರೆ ಇದು ನಮಗೆ ಅರ್ಥವಾಗುತ್ತದೆ. ಯಾವುದೋ ಒಂದು ಪ್ರೊಟೆಸ್ಟ್ ಮಾಡುವುದಕ್ಕೆ ಹೋಗುತ್ತೇವೆ. ಪೈಸ್‌ರೈಸ್ ಬಗ್ಗೆ ಹೋಗುತ್ತೇವೆ, ಅಟ್ರಾಸಿಟೀಸ್ ಆಗಿರುವುದರ ಬಗ್ಗೆ ಹೋಗುತ್ತೇವೆ ಮತ್ತೆ ನಮ್ಮ ಪಕ್ಷದ ಕಾರ್ಯಕರ್ತರಿಗೆ ಅನ್ಯಾಯ ಆಗುತ್ತದೆಂದು ನಾವೇ ಎಜಿಟೇಷನ್ ಲೀಡ್ ಮಾಡುತ್ತೇವೆ, ಆದ್ದರಿಂದ ಕೇಸ್ ಹಾಕಿದ್ದಾರೆಂದು ಇದನ್ನು ನಾವು ಅರ್ಥ ಮಾಡಿಕೊಳ್ಳಬಲ್ಲೆವು. ಅದು ಮುಖ್ಯವಾದ ವಿಚಾರವಲ್ಲ. ಈಗ ವಿಷಯ ಬೇರೆ ಕಡೆ ಹೋಗುತ್ತಿದೆ. ಅಧ್ಯಕ್ಷರ ಮೇಲೆ ಅಥವ ಮುಖ್ಯಮಂತ್ರಿಗಳ ಮೇಲೆ ವಿಷಯ ಪಲ್ಲಟವಾಗುತ್ತಿದ್ದು, ಸಂಭಂದ ಪಟ್ಟ ವಿಚಾರದ ಬಗ್ಗೆ ಚರ್ಚೆಯಾಗುತ್ತಿಲ್ಲ. ಈ ಸರ್ಕಾರದ ಕ್ರೆಡಿಬಿಲಿಟಿಯನ್ನು ನಾವು ಏಕೆ ಕ್ವೆಶ್ಚನ್ ಮಾದುತ್ತಿದ್ದೇವೆಂದರೆ ಇವತ್ತು ತಮ್ಮ ಸಂಪುಟದಲ್ಲಿರುವ ಮಂತ್ರಿ ಮಹೋದಯರ ಮೇಲೆ ಏನು ಕೇಸಿದೆ ಅದರ ಮೇಲೆ ತಾವೇನು ಬಿ ರಿಪೋರ್ಟ್‌ನ್ನು ಸಬ್‌ಮಿಟ್ ಮಾಡಿದ್ದೀರಿ, ನಿಮ್ಮ ಸರ್ಕಾರ ಬಂದ ಮೇಲೆ ಎರಡೂವರೆ ವರ್ಷಗಳಲ್ಲಿ ಯಾವ ತರಹದ ಕೇಸ್ ಎಂದು ವಿವರಣೆ ಕೊಡುತ್ತೀವೆ ಎಂದು ತಾವು ಹೇಳಿದ್ದೀರಿ. ನಾಳೆ ಪತ್ರಿಕೆಗಳಲ್ಲಿ ಇಷ್ಟು ಜನ ಶಾಸಕರ ಮೇಲೆ ಇಷ್ಟೊಂದು ಕೇಸಿದೆ ಎಂದು ಬಂದ ಮೇಲೆ ಆ ಶಾಸಕರ ಗತಿಯೇನು? ಆದ್ದರಿಂದ ಮುಖ್ಯಮಂತ್ರಿಗಳು ಬೇಕಾಗಿರುವ ಎಲ್ಲಾ ವಿವರಗಳನ್ನು ಮಧ್ಯಾಹ್ನದ ಹೊತ್ತಿಗೆ ತರಿಸಿಕೊಳ್ಳಬಹುದು. ಈ ಪ್ರಶ್ನೆಗೆ ತಾವು ಇವತ್ತೇ ಉತ್ತರಗಳನ್ನು ತರಿಸಬಹುದು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಅನೇಕ ಜನ ಶಾಸಕರು ಇದ್ದಾರೆ, ಯಾರೋ ನಾಲ್ಕು ಜನ ತಪ್ಪು ಮಾಡಿರಬಹುದು, ಈಕ್ವೇಟ್ ಆಗುತ್ತಾರೆ, ವಿಷಯ ಬೇರೆ ಕಡೆಗೆ ಹೋಗುತ್ತದೆ. ಆದರಿಂದ ತಾವು ದಯವಿಟ್ಟು ಇವತ್ತೇ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು

ನನ್ನ ಮನವಿ.

ಶ್ರೀ ವೈ.ಕೆ.ರಾಮಯ್ಯ :- ಮಾನ್ಯ ಅಧ್ಯಕ್ಷರೆ, ನನ್ನ ನೋವು ಇಷ್ಟೇ. ಒಂದು ಮೊಕದ್ದಮೆ ನನ್ನ ಮೇಲಿದೆ ಎಂದು ಮುಖ್ಯಮಂತ್ರಿಗಳು ಹೇಳಿಕೆಯಲ್ಲಿ ಹೇಳಿದ್ದಾರೆ. ಅಂತಹ ಸಂಧರ್ಭದಲ್ಲಿ ನನ್ನ ಕಡಿಮೆ ತಿಳಿವಳಿಕೆಗೆ ತಿಳಿದ ಮಟ್ಟಿಗೆ ಯಾರಮೇಲಾದರೂ ಅಪವಾದ ಇದೆಯೆಂದು ಸದನದಲ್ಲಿ ಪ್ರಸ್ತುತವಾದರೆ ಅಂತಹ ಸದಸ್ಯರಿಗೆ ಅದರ ಬಗ್ಗೆ ವಿವರಣೆ ಕೊಡಲು ಅಧಿಕಾರವಿದೆ ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ. ಮಂತ್ರಿಗಳ ಬಗ್ಗೆ ನಾನು ಮಾತನಾಡುವುದಿಲ್ಲ, ಇನೊಬ್ಬರ ಬಗ್ಗೆ ನಾನು ಮಾತನಾಡುವುದಿಲ್ಲ. ನನ್ನ ಹೆಸರು ಇಲ್ಲಿ ಪ್ರಸ್ತಾಪವಾಗಿದೆ, ಅದರ ಬಗ್ಗೆ ವಿವರಣೆ ಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೆ ಬಹುಶಃ ಇದರಲ್ಲಿ ಗೊಂದಲಕ್ಕೆ ಅವಕಾಶವೇ ಇಲ್ಲ, ಅದ್ಯಾಕೆ ಬಂತು ಎಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ನಾವು ಸ್ಪಷ್ಟವಾಗಿ ಒಂದು ವಿಚಾರ ತಿಳಿದುಕೊಳ್ಳಬೇಕು. ಪ್ರಶ್ನೆ ಕೇಳಿದ್ದು ನಾವಲ್ಲ, ಸರ್ಕಾರದಿಂದ ಸೊಮೊಮೊಟೊ ಸ್ಟೇಟ್‌ಮೆಂಟ್ ಕೊಟ್ಟಿದ್ದಲ್ಲ. ವಿರೋಧಪಕ್ಷದ ಮುಖ್ಯಸಚೇತಕ ರಾಯರೆಡ್ಡಿಯವರೇ ಈ ಪ್ರಶ್ನೆ ಹಾಕಿದ್ದು , ಎಂಎಲ್‌ಎಗಳು, ಎಂಎಲ್‌ಸಿಗಳು, ಮಾಜಿ ಮಂತ್ರಿಗಳು ಇವರೆಲ್ಲರ ಮೇಲೆ ಕೇಸೇನಿದೆ ವಿವರ ಕೊಡಿ ಎಂದು. ಅದನ್ನು ಸಂಗ್ರಹಿಸಲು ನಾವು ಬಹಳ ಶ್ರಮಪಟ್ಟೆವು . ಏಕೆಂದರೆ ಏಕೆ ಪ್ರಶ್ನೆ ಬರಲಿಲ್ಲ ಏಕೆ ಡಿಫರ್ ಆಗುತ್ತಿದೆ ಎಂದು ಕೇಳುತ್ತಲೇ ಇದ್ದರು. ಇದು ಹೌಸಿಗೆ ಬರುತ್ತಲೇ ಇರಲಿಲ್ಲ. ಈ ರೀತಿ ಪ್ರಶ್ನೆ ಕೇಳುವುದು ಅದಕ್ಕೆ ವಿವರ ಕೊಡುವುದು ಅದೆಷ್ಟರಮಟ್ಟಿಗೆ ಸಮಂಜಸವೋ ಗೊತ್ತಿಲ್ಲ. ಮಾನ್ಯ ನಂಜುಂಡಸ್ವಾಮಿಯವರಾಗಲಿ, ನಾನಾಗಲಿ, ನಮ್ಮ ಉಪಮುಖ್ಯಮಂತ್ರಿಗಳಾಗಲೀ, ಕೋರ್ಟ್‌ನಲ್ಲಿ ವಕೀಲರಾಗಿ ಕೆಲಸ ಮಾಡಿದವರು. ತಮಗೆ ಗೊತ್ತಿದೆ ಕಂಪ್‌ಲೇಂಟ್ ದೂರು ಕೊಟ್ಟ ಕೂಡಲೇ ಅದೇ ಎಎಫ್‌ಐಆರ್ ಮಾಡುತ್ತಾರೆ, ಆಮೇಲೆ ಬಿ ರಿಪೋರ್ಟ್ ಕೊಡಬೇಕಾಗುತ್ತದೆ ಅಥವಾ ಚಾರ್ಜ್‌ಶೀಟ್ ಹಾಕುತ್ತಾರೆ. ಎರಡರಲ್ಲಿ ಒಂದು ಕೆಲಸ ಮಾಡುತ್ತಾರೆ. ದೂರು ಕೊಟ್ಟಿದ್ದೆಲ್ಲ ಅಂದರೆ, ಒಬ್ಬರು ನಾಳೆ ನನ್ನ ಮೇಲೇನೆ ಕಂಪ್ಲೇಂಟ್ ಕೊಡಬಹುದು. ಆ ರೀತಿ ಕೊಟ್ಟ ಕೂಡಲೇ ಬಿ ರಿಪೋರ್ಟ್ ಏಕೆ ಕೊಟ್ಟಿರಿ ಎಂದು ಪ್ರಶ್ನೆ ಹಾಕಿಬಿಟ್ಟರೆ ಎಲ್ಲಿಗೆ ಹೋಗುತ್ತದೆ. ದಯಮಾಡಿ ಇದನ್ನು ಸ್ವಲ್ಪ ಆಲೋಚನೆ ಮಾಡಿ. ಈ ಸದನದಲ್ಲಿ ನಾವು ಎಲ್ಲಿವರೆಗೆ ಕೊಂಡುಹೋಗುತ್ತಿದ್ದೇವೆ ಎನ್ನುವುದನ್ನು ದಯಮಾಡಿ ಆಲೋಚನೆ ಮಾಡಬೇಕು. Tomorrow somebody can file some complaint against Sri Deshapande. There is a question as to whether he can continue as the Leader of Opposition. ಬಿ ರಿಪೋರ್ಟ್ ಕೊಟ್ಟಿದ್ದಾರೆ ಅಥವಾ ಛಾರ್ಜ್‌ಷೀಟ್ ಹಾಕಿದ್ದಾರೆ ಎನ್ನುವ ಪ್ರಶ್ನೆ ನಾಳೆ ಬರುತ್ತದೆ.

ಶ್ರೀ ಬಸವರಾಜರಾಯರೆಡ್ಡಿ :- ಮಾನ್ಯ ಅಧ್ಯಕ್ಷರೆ,.....

ಶ್ರೀ ಎಂ. ವೀರಪ್ಪಮೊಯಿಲಿ :- ದಯವಿಟ್ಟು ಸ್ವಲ್ಪ ತಾಳಿ ನೀವು ವಕೀಲರು ಅಲ್ಲ.

SRI BASAVARAJA RAYA REDDI :- I am an advocate. I am a graduate of LL.M. I am a Master of Law.

SRI VEERAPPAMOILY :- You are the Master in Law. The question is when a complaint is filed in a police station, when FIR is filed, either a charge sheet has to be filed or a 'B' report has to be filed. One of the alternatives should be done. ಈಗ ದೂರು ಕೊಟ್ಟಕೂಡಲೇ ಆ ಮನುಷ್ಯ ಕೆಟ್ಟವನಾಗಿಬಿಟ್ಟರೆ, ಕ್ರಿಮಿನಲ್ ಆಗಿಬಿಟ್ಟರೆ ಬಹುಶಃ ಯಾರಿಗೂ ಯಾವ ರಕ್ಷಣೆ ಸಹ ಸಿಗುವುದಿಲ್ಲ. ಈ ಪರಿಸ್ಥಿತಿ ಇದೇ ಆಗಿದೆ ಅನೇಕ ಎಂ.ಎಲ್.ಎ.ಗಳ ಮೇಲೆ ಇಲ್ಲಿ I can understand. ಛಾರ್ಜ್ ಶೀಟ್ ಹಾಕಿದ ಮೇಲೆ ಸರ್ಕಾರದವರು ಆ ಕೇಸನ್ನು ವಿತ್‌ಡ್ರಾ ಮಾಡಿದರೆ that is one thing. That is a little more serious. ಇದರಲ್ಲಿ ಸನ್ಮಾನ್ಯ ರೇವಣ್ಣನವರ ಮೇಲೆ ಏನಾಗಿದೆ ಎಂದರೆ, it is pending before the sessions for a trial. ಸಾಂಡ್ರಾರವರ ಕೇಸ್ it is not pending. ಬಿ ರಿಪೋರ್ಟ್ ಕೊಟ್ಟಿದೆ. It never came up for trial. This is not a case where it is withdrawn or it is a case of filing chargesheet. ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಿ, ಈಗ ರೇವಣ್ಣನವರ ಕೇಸ್ ಬಗ್ಗೆ ನಾವು ಚರ್ಚೆ ಮಾಡುವುದು ಸಾಧ್ಯವಾಗುವುದಿಲ್ಲ, it is sub-judice, since a chargesheet is already there, case is taken on file before the Sessions Court. ವೈ.ಕೆ. ರಾಮಯ್ಯನವರ ಕೇಸ್ ಕೂಡ it is on trial, unlike all these cases. ಇದು ಟ್ರೈಯಲ್‌ನಲ್ಲಿದೆ. ಅದು ಸಾಧ್ಯವೋ ಅಲ್ಲವೋ ಎನ್ನುವ ಪ್ರಶ್ನೆಯನ್ನು ಕೋರ್ಟು ತೀರ್ಮಾನ ಮಾಡಬೇಕು. ನಮ್ಮ ಈ ಸದನದಲ್ಲಿ ಅದನ್ನು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಚರ್ಚೆ ಮಾಡಿದರೆ that will be sub-judice. ಅವರು ಎಕ್ಸ್‌ಪ್ಲನೇಷನ್ ಕೊಡುವುದು ಕೂಡ ಸಾಧುವಾಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ :- ನನಗೆ ವಿಚಾರ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ಸದನ ನಡೆಯುವುದಕ್ಕೆ ಬಿಡುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ :- ಆದರೆ ಇದು ಸಬ್‌ಜುಡೀಸ್. ಸದನ ನಡೆಯಲಿಕ್ಕೆ ಬಿಡುವುದು .....

ಶ್ರೀ ವೈ.ಕೆ. ರಾಮಯ್ಯ :- ನನ್ನ ಮೇಲೆ ಯಾರ ಕಡೆಯಿಂದ ಕೇಸನ್ನು ಹಾಕಿಸಿದ್ದೀರಾ ಎಂದು ನಾನು ಈ ಸದನಕ್ಕೆ ಹೇಳಬೇಕಾಗುತ್ತದೆ. ನನಗೆ ಅವಕಾಶ ಕೊಡಿ.

SRI VEERAPPAMOILY :- It is under trial. ನಾನು ಕೇಸು ಹಾಕಿದ್ದು ಸರಿಯೋ ಅಲ್ಲವೋ ಎಂಬ ವಿಚಾರ ನಾನು ಚರ್ಚೆ ಮಾಡುವುದಕ್ಕೆ ಈ ಸದನ ಕೂಡ ವೇದಿಕೆ ಅಲ್ಲ. It is under trial. ಆದರೆ ಸಾಂಡ್ರಾರವರ ವಿರುದ್ಧ ತಾವು ಯಾವ ಕೇಸ್ ಹೇಳಿದಿರಿ it is not under trial. ಬಿ ರಿಪೋರ್ಟ್ ಕೊಟ್ಟಿದ್ದಾರೆ. ಬಿ ರಿಪೋರ್ಟ್ ಒಮ್ಮೆ ಕೋರ್ಟ್ ಅಕ್ಸೆಪ್ಟ್ ಮಾಡಿದೆ. ಪುನಃ ರೀ ಓಪನ್ ಮಾಡಿದ್ದು ಹೈಕೋರ್ಟ್, ಆ ರೀಓಪನಿಂಗ್ ಆರ್ಡರನ್ನು ಸ್ಟೇ ಮಾಡಿದೆ. It is not that the case has been withdrawn. ಆಮೇಲೆ ರಾಮಲಿಂಗಾರೆಡ್ಡಿಯವರು ಕೂಡಾ ಅಷ್ಟೆ. It is not under trial. ಕೃಷ್ಣಪ್ಪನವರ ಕೇಸ್ ಕೂಡ it is not under trial. ಮಿನಿಸ್ಟರ್ಸ್ ಯಾರು ಇದ್ದಾರೆ, ಎಕ್ಸೆಪ್ಟ್ ರೇವಣ್ಣನವರ ಒಂದು ಕೇಸ್ ಬಿಟ್ಟರೆ ಬಾಕಿ ಯಾವ ಕೇಸ್‌ನಲ್ಲೂ ಕೂಡ chargesheet has not been filed. 'B' report has been filed. No trial is pending. When there is no trial at all. ನೀವು ಕಂಪ್ಲೇಂಟ್ ಕೊಟ್ಟಕೂಡಲೇ ಮಿನಿಸ್ಟರ್ ಮಾಡಬಾರದು

ಎಂದು ಹೇಳಿ ಒಂದು ಡಿಸ್-ಕ್ವಾಲಿಫಿಕೇಷನ್ ಹಾಕಿಬಿಟ್ಟರೆ ಬಹುಶಃ ಇದು ಸಂವಿಧಾನಕ್ಕೂ ಸರಿ ಇಲ್ಲ. ಪ್ರೊಪ್ರೈಟಿಗೂ ಸರಿ ಇಲ್ಲ, ನೈತಿಕವಾಗಿಯೂ ಕೂಡ ಸರಿ ಇಲ್ಲ. ಆದ್ದರಿಂದ ಇದರ ಬಗ್ಗೆ ನಾವು ಹೆಚ್ಚು ಮಾತು ಮುಂದುವರೆಸುವುದು ಸಾಧುವಲ್ಲ ಎಂದು ತಮಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶ್‌ಪಾಂಡೆ :- ಮಾನ್ಯ ಮುಖ್ಯಮಂತ್ರಿಗಳೇ ನನಗೆ ಹೆಚ್ಚಿನ ನಾಲೆಜ್ಡ್ ಇಲ್ಲ. ಸ್ವಲ್ಪ ಲಾ ನಾಲೆಜ್ಡ್ ಇದೆ. ಸಬ್‌ಜುಡೀಸ್ ಎಂದರೆ ಯಾವುದೇ ಒಂದು ಕೇಸನ್ನು ಕೋರ್ಟ್‌ನಲ್ಲಿ ಹಾಕಿ ಇಲ್ಲಿ ಸಬ್ ಜುಡೀಸ್ ಇದೆ ಚರ್ಚೆ ಮಾಡುವುದಕ್ಕೆ ಕೊಡುವುದಿಲ್ಲ ಎಂದರೆ ನಡೆಯುವುದಿಲ್ಲ. ಸಬ್ ಜುಡೀಸ್ ಯಾವಾಗ? What is subjudice? ಅವರು ಏನಾದರೂ ಮೆರಿಟ್ ಮೇಲೆ ಮಾತನಾಡಿದರೆ, suppose he tries to go into the merit of the case so as to prejudice, he can be stopped. But the Member wants to only explain under what circumstances the case has been filed against him. ಆ ಲಿಬರ್ಟಿ ಅವರಿಗೆ ಸಿಗಬೇಕು.

Sri Harnahalli Ramaswamy :- Even that affects the merit of the case. ಟ್ರೈಯಲ್‌ನಲ್ಲಿರುವ ಕೇಸ್‌ಗಳಿಲ್ಲ ಏನೇ ಮಾತನಾಡಿದರೂ ಅಫೆಕ್ಟ್ ಆಗುತ್ತದೆ.

(ಗೊಂದಲ)

SRI R.V. DESHAPANDE :- How it is going to affect? The Presiding Officer is different. Now you are not the Presiding Officer. ತಾವೇನು ಪ್ರಿಸೈಡಿಂಗ್ ಆಫೀಸರ್ ಅಲ್ಲ , ತಾವೇನು ಜಡ್ಜಮೆಂಟ್ ಕೊಡುವುದಿಲ್ಲ. Megistrate is at some different place. ಡಿಸ್ಟ್ರಿಕ್ಟ್ ಜಡ್ಜ ಇರಬಹುದು, ಮ್ಯಾಜಿಸ್ಟ್ರೇಟ್ ಇರಬಹುದು. ಆ ಮಾನ್ಯ ಸದಸ್ಯರಿಗೆ ಏನು ಬೇಕೆಂದರೆ ಯಾವ ಪ್ರಕಾರ ಮಿನಿಸ್ಟರಿನಿಂದ ಎಕ್ಸ್‌ಪ್ಲನೇಷನ್ ಆಯಿತು , ಇವತ್ತು ರಾಂಗ್ ಸಿಗ್ನಲ್ಸ್ ಕಾನ್‌ಸ್ಟಿಟ್ಯೂಯೆನ್ಸಿಗೆ ಹೋದರೆ ನಿಮ್ಮದು ಕೇಸ್ ಪತ್ರಿಕೆಯಲ್ಲಿ ಬಂದಿದೆ ಅವರು ಏನು ಉತ್ತರವನ್ನು ಕೊಡಬೇಕು ? He should be given an opportunity.

ಶ್ರೀ ಕೆ.ಎಚ್. ರಂಗನಾಥ್ :- ಅವರು ಆ ರೀತಿ ಹೇಳಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಮುಖ್ಯಮಂತ್ರಿಗಳು ಸಬ್‌ಜುಡೀಸ್ ಆಗುತ್ತದೆ. ಚರ್ಚೆಗೆ ಅವಕಾಶ ಇಲ್ಲ ಎಂದು ಹೇಳಿದರು.

ಶ್ರೀ ಕೆ.ಎಚ್. ರಂಗನಾಥ್ :- ಹಾಗಲ್ಲ ಅವರು ಫ್ಯಾಕ್ಟ್‌ನ್ನು ಹೇಳಿದರು. ಅದು ಟ್ರೈಯಲ್‌ನಲ್ಲಿದೆ, ಬಹಳ ಮಟ್ಟಿಗೆ ಸಬ್‌ಜುಡೀಸ್ ಆಗಬಹುದೇನೊ ಎಂದು ಹೇಳಿದರು. ಅಧ್ಯಕ್ಷರಿಗೆ ಅವಕಾಶ ಕೊಡಬೇಡಿ ಎಂದು ಹೇಳಲೇ ಇಲ್ಲ. It is before the speaker.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೇ, ನಾನು ನನ್ನ ವಿಷಯದಲ್ಲಿಯೂ ಇವರ ಯಾರ ಮೇಲೂ ಅಪವಾದ ಇಲ್ಲವೇ ಇಲ್ಲ. ಸರ್ಕಾರದ ಮೇಲೆ ನನ್ನ ಸಂಬಂಧವೇ ಇಲ್ಲ. ನನ್ನ ಮೇಲೆ ಒಂದು ಮೊಕದ್ದಮೆ ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಒಬ್ಬ ವ್ಯಕ್ತಿಯ ಅದರಲ್ಲೂ ಆತನ

ವೈಯಕ್ತಿಕವಾದಂಥ ನಡತೆಯ ಬಗ್ಗೆ ಸದನದಲ್ಲಿ ಪ್ರಸ್ತಾಪ ಬಂದಾಗ ಅಂಥ ಸಂದರ್ಭದಲ್ಲಿ ಅದಕ್ಕೆ ಹೇಳಿಕೆ ಕೊಡುವುದಕ್ಕೆ ಸಂಬಂಧಪಟ್ಟ ಸದಸ್ಯನಿಗೆ ಅವಕಾಶ ಕೊಡಬೇಕಾದದ್ದು ಈ ಸದನದ ಧರ್ಮ ನ್ಯಾಚುರಲ್ ಜಸ್ಟಿಸ್ ಧರ್ಮ. ನನ್ನ ಕ್ಷೇತ್ರದಲ್ಲಿ ನನಗೆ ವೋಟು ಕೊಟ್ಟು ಕಳುಹಿಸಿದ್ದಾರಲ್ಲ ಜನರು ಅವರಿಗೂ ಕೂಡ ಅದು ತಲುಪಬೇಕಾಗುತ್ತದೆ. ಆದ್ದರಿಂದ ತಮ್ಮಲ್ಲಿ ಕೈಮುಗಿದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ನನ್ನ ಮೇಲೆ ಅವರು ಏನು ಆಪಾದನೆ ಇದೆ ಎಂದು ಹೇಳಿದ್ದಾರೊ ಆ ವಿಷಯದಲ್ಲಿ ನನ್ನ ವೈಯಕ್ತಿಕವಾದಂಥ ವಿವರಣೆ ಕೊಡಬೇಕಾಗುತ್ತದೆ. ನಾನು ಯಾರ ಮೇಲೂ ಅಪವಾದ ಮಾಡುವುದಿಲ್ಲ. ಏತಕ್ಕೆ ಕೇಸನ್ನು ಹಾಕಿದರು ಎಂದು ವೈಯಕ್ತಿಕವಾದ ಹಿನ್ನೆಲೆಯನ್ನು ತಿಳಿಸಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಡಿ ಅಷ್ಟೆ. ಮುಖ್ಯಮಂತ್ರಿಗಳ ಬಗ್ಗೆಯಾಗಲಿ ಮಂತ್ರಿಗಳ ಬಗ್ಗೆಯಾಗಲೀ, ಬೇರೆ ಶಾಸಕರ ಬಗ್ಗೆಯಾಗಲೀ ನನ್ನ ಪ್ರಶ್ನೆ ಇಲ್ಲ. ನನ್ನ ಮೇಲೆ ಮಾಡಿರುವಂಥ ಅಪವಾದವನ್ನು ಏತಕ್ಕೆ ಮಾಡಿದ್ದಾರೆ ಎನ್ನುವುದಕ್ಕೆ ವೈಯಕ್ತಿಕವಾದಂಥ ವಿವರಣೆ ಕೊಡುವುದಕ್ಕೆ ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :- ಈಗ ತಾವು ಪತ್ರವನ್ನು ಕಳುಹಿಸಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ :- ಆಯಿತು ಸ್ವಾಮಿ. ನಾಳೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು :- ಆದರೆ ಹಿನ್ನಲೆಯನ್ನೆಲ್ಲಾ ತೆಗೆದುಕೊಳ್ಳಬೇಕು. ನಾನು ಹೇಳುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹಾರ್ನಳ್ಳಿರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) :- ಮಾನ್ಯ ಅಧ್ಯಕ್ಷರೇ, ದಿನಾಂಕೆ : 9-3-93ರ ಲಿಖಿತ ಮೂಲಕ ಉತ್ತರಿಸುವ 15ನೇ ಪಟ್ಟಿಯಲ್ಲಿರುವ 102 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ : 1787, 1792, 1788, 1658, 1745, 1657, 1655, 1653, 1645, 1740, 1661, 1428, 1470, 1434, 1790, 1789, 1749, 1545, 1546, 1547, 1748, 1548, 376, 343, 1358, 572, 1742, 966, 1090, 735, 172, 784, 222, 267, 524, 525, 1519, 1092, 1485, 1481 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 62 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಪಟ್ಟಣದಲ್ಲಿ ಪ್ರತ್ಯೇಕ ಟ್ರಾಫಿಕ್ ಪೋಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆ

872 (1786) ಶ್ರೀ ಸಾದತ್‌ಆಲಿ ಖಾನ್(ಚನ್ನಪಟ್ಟಣ): ಮಾನ್ಯ ಮಾಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣದಲ್ಲಿ ಪ್ರತ್ಯೇಕ ಟ್ರಾಫಿಕ್ ಪೋಲೀಸ್ ಠಾಣೆಯೊಂದನ್ನು ತೆರೆಯುವ ಪ್ರಸ್ತಾವನೆಯು ಕಳೆದ ಎರಡು ವರ್ಷಗಳಿಂದ ಸರ್ಕಾರದಲ್ಲಿ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?